ಜನಪ್ರಿಯ ಗ್ರಂಥಮಾಲೆ

೩೧೮

ತ್ರಿವೇಣಿಯವರ ಕಾದಂಬರಿಗಳು

ವಿಜಯಶ್ರೀ ಸಬರದ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಅಕ್ಟೋಬರ, ೧೯೮೦

ಉಪನ್ಯಾಸ ಗ್ರಂಥಮಾಲೆ

೩೧೮

ತ್ರಿವೇಣಿಯವರ ಕಾದಂಬರಿಗಳು

ವಿಜಯಶ್ರೀ ಸಬರದ, ಎಂ. ಎ.

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಅಕ್ಟೋಬರ, ೧೯೮೦

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಅಕ್ಟೋಬರ, ೧೯೮೦

ಬೆಲೆ : ೫೦ ಪೈಸೆ

ಮುದ್ರಕರು :

ಜಿ. ಬಿ. ಮನ್ವಾಚಾರ

ಸಹಾಯಕ ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ-೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧ ಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿ ಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರ ಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆ ಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜ ವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೧೭ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು–ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಎಸ್. ಒಡೆಯರ
ಕುಲಪತಿಗಳು

ಅರಿಕೆ

ಕಾದಂಬರಿ ಸಾಹಿತ್ಯದಲ್ಲಿ, ಅದೂ ಮಹಿಳಾ ಲೇಖಕಿಯರಲ್ಲಿ ಎದ್ದು ಕೇಳಿಬರುವ ಹೆಸರೆಂದರೆ ತ್ರಿವೇಣಿಯವರದು. ಅವರ ಕಾದಂಬರಿಗಳನ್ನು ಮೊದಲಿನಿಂದಲೂ ಓದುತ್ತಾ ಬಂದ ನನಗೆ, ಅವುಗಳ ಬಗೆಗೆ ಬರೆಯಬೇಕೆಂದೆನಿಸಿತ್ತು.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದವರು ದಿ. ೨೧-೧೨-೧೯೭೮ ರಂದು ಬೀದರ ಜಿಲ್ಲೆಯ ಬಗದಲದಲ್ಲಿ ಉಪನ್ಯಾಸವನ್ನು ಏರ್ಪಡಿಸಿದ್ದರು. ಆಗ ನಾನು ಮಾಡಿದ ಉಪನ್ಯಾಸವೇ ಈಗ ಪುಸ್ತಿಕೆಯ ರೂಪದಲ್ಲಿ ಪ್ರಕಟವಾಗಿದೆ.

ನನ್ನ ಬರವಣಿಗೆಗೆ ಹೊಸ ದೀಕ್ಷೆಕೊಟ್ಟು, ಮಾರ್ಗದರ್ಶನ ನೀಡಿ ಮುನ್ನಡೆಸುತ್ತಿರುವ ಪತಿ ಶ್ರೀ ಬಸವರಾಜ ಸಬರದವರಿಗೆ ಮೊದಲ ನಮನಗಳು.

ನನಗೆ ಉಪನ್ಯಾಸವೀಯಲು ಅವಕಾಶಮಾಡಿಕೊಟ್ಟು, ಈ ಕೃತಿ ಹೊರತಂದ ಪ್ರಸಾರಾಂಗದ ಅಧಿಕಾರಿಗಳಾದ ಶ್ರೀ ಚೆನ್ನವೀರ ಕಣವಿ, ಶ್ರೀ ಎಸ್. ಬಿ. ನಾಯಕ ಹಾಗೂ ಶ್ರೀ ಲಿಂಗರಾಜ ಗುಡ್ಡೀನ ಅವರಿಗೆ ಕೃತಜ್ಞತೆಗಳು.

ನನ್ನ ಬರಹದ ಬಗೆಗೆ ಮೊದಲಿನಿಂದಲೂ ಆಸಕ್ತಿ ಹೊಂದಿರುವ ತಂದೆ ಶ್ರೀ ಗುಣವಂತರಾವ ಪಾಟೀಲ ಮತ್ತು ತಂಗಿ ಪ್ರಭಾ ಇವರನ್ನೂ ಈ ವೇಳೆಯಲ್ಲಿ ಸ್ಮರಿಸದಿರಲಾರೆ.

ಅಕ್ಕಮಹಾದೇವಿ ಮಹಿಳಾ **ವಿಜಯಶ್ರೀ ಸಬರದ**
ಮಹಾವಿದ್ಯಾಲಯ, ಬೀದರ
೧೫-೯-೧೯೮೦

ಪರಿವಿಡಿ

೧. ತ್ರಿವೇಣಿಯವರು

ಮಹಿಳಾ ಲೇಖಕಿಯರಲ್ಲಿ ಎದ್ದು ಕೇಳಿ ಬರುವ ಹೆಸರೆಂದರೆ ತ್ರಿವೇಣಿಯವರದು. ಇವರ ಹುಟ್ಟು ಹೆಸರು ಭಾಗೀರಥಿ. ಕರೆದ ಹೆಸರು ಅನುಸೂಯ. ಆದರೆ ಮನೆಯಲ್ಲಿ ಎಲ್ಲರೂ ಮೆಚ್ಚಿ ಕೂಗಿದ್ದು 'ಅಂಚು' ಎಂದು. ಪ್ರಸಿದ್ಧ ಲೇಖಕಿಯರಾದ ಎಂ. ಕೆ. ಇಂದಿರಾ ಅವರು ಮಾತ್ರ ಇವರನ್ನು ತ್ರಿವೇಣಿ ಎಂದು ಕರೆದರು. ಈ ಮೂರೂ ಹೆಸರುಗಳನ್ನೊಳಗೊಂಡ ಲೇಖಕಿಯೇ ತ್ರಿವೇಣಿ. ಸಾಹಿತ್ಯ ಪ್ರಪಂಚದಲ್ಲಿ ಹಾಗೂ ನಿಜ ಜೀವನದಲ್ಲಿ ಇದೇ ಹೆಸರು ಸ್ಥಿರವಾಯಿತು.

ತ್ರಿವೇಣಿಯವರು ಜನಿಸಿದ್ದು ೧೯೨೮ರಲ್ಲಿ. ಮಂಡ್ಯ ಜಿಲ್ಲೆಯವರಾದ ಇವರು ಸಮಕಾಲೀನ ಕನ್ನಡದ ಮಹಿಳಾ ಕಾದಂಬರಿಕಾರ್ತಿ. ಬಿ. ಎಂ. ಕೃಷ್ಣಸ್ವಾಮಿ ಮತ್ತು ತಂಗಮ್ಮನವರಿಗೆ ಎರಡನೆಯ ಮಗಳಾಗಿ ತ್ರಿವೇಣಿ ಜನಿಸಿದರು. ಕನ್ನಡದ ಕಣ್ವ ಎನಿಸಿದ ಬಿ. ಎಂ. ಶ್ರೀಕಂಠಯ್ಯನವರು ತ್ರಿವೇಣಿಯವರ ತಂದೆಯ ಸಹೋದರರು.

ತ್ರಿವೇಣಿಯವರು ತಮ್ಮ ಎಂಟನೆಯ ವರ್ಷದಲ್ಲಿ ತೀವ್ರ ಗೂರಲಿನಿಂದ ಬಳಲುತ್ತಿದ್ದರು. ಆಗ ಅವರು ಸಮಯ ಕಳೆಯಲೋಸುಗ ಅಭ್ಯಾಸದಲ್ಲಿ ನಿರತರಾಗುತ್ತಿದ್ದರು. ಓದುವದರಲ್ಲಿಯ

ಅಂದಿನ ಅಭಿರುಚಿ ಹಾಗೇ ಗಟ್ಟಿಯಾಗುತ್ತಾ ಬಂದು ಮುಂದೆ ಅವರು ಸಾಹಿತ್ಯ ಪ್ರಪಂಚದಲ್ಲಿ ಬರಲು ಕಾರಣವಾಯಿತೆನ್ನ ಬಹುದು. ಯಾವುದನ್ನೇ ಆಗಲಿ ಅತ್ಯಂತ ಅಭಿರುಚಿಯಿಂದ ಮನಸ್ಸುಗೊಟ್ಟು ಅವರು ಓದುತ್ತಿದ್ದರು.

ಇವರು ತಮ್ಮ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮಂಡ್ಯ ದಲ್ಲಿಯೇ ಮುಗಿಸಿ ಕಾಲೇಜು ಜೀವನವನ್ನು ಮೈಸೂರಿನ ಮಹಾ ರಾಜಾ ಕಾಲೇಜಿನಲ್ಲಿ ಕಳೆದರು. ಮೈಸೂರಿನಲ್ಲಿ ಇವರು ತಮ್ಮ ಅಜ್ಜಿಯ ಮನೆ ಸೇರಿದುದರಿಂದ ಓದಿಗೆ ಇನ್ನೂ ಅನುಕೂಲ ವಾಯಿತು. ಕಾಲೇಜದಲ್ಲಿ ಇವರು ತೆಗೆದುಕೊಂಡ ಮುಖ್ಯ ವಿಷಯ ಮನಶ್ಶಾಸ್ತ್ರ. ಅಪಾರ ಶ್ರದ್ಧೆಯಿಂದ, ಒಳ್ಳೆಯ ಅಭಿರುಚಿ ಯಿಂದ, ಸತತ ಪ್ರಯತ್ನದಿಂದ ಅಭ್ಯಸಿಸಿ ಚಿನ್ನದ ಪದಕದೊಂದಿಗೆ ಬಿ. ಎ. ಪದವಿಯನ್ನು ಪಡೆದರು. ಪ್ರಥಮ ವರ್ಗದಲ್ಲಿ ತೇರ್ಗಡೆ ಯಾದ ಇವರಿಗೆ ಆಗ ಕೆಲಸ ಸಿಗುವದರಲ್ಲಿ ಯಾವ ಸಂಶಯವೂ ಇರಲಿಲ್ಲ. ಬಿ. ಎ. ಮುಗಿದ ತಕ್ಷಣ ಮಂಡ್ಯದಲ್ಲಿ ಅಧ್ಯಾಪಕಿ ವೃತ್ತಿಯನ್ನು ಕೈಕೊಂಡರು.

ಕೆಲವು ದಿನಗಳ ನಂತರ ಅಧ್ಯಾಪಕಿ ವೃತ್ತಿ ನೀರಸವೆನಿಸಿತು. ಇವರ ತೀಕ್ಷ್ಣ ದೃಷ್ಟಿ ಬದಲಾಗುತ್ತಿರುವ ಸಮಾಜವನ್ನು ಸೂಕ್ಷ್ಮ ವಾಗಿ ಗಮನಿಸಿತು. ಅನಂತ ಭಾವನೆಗಳು, ವಿಚಾರಗಳು ಮೊಳಕು ಹಾಕಹತ್ತಿದವು. ಸಮಾಜದಲ್ಲಿಯ ನೋವು-ನಲಿವು. ಸುಖ-ದುಃಖ ಇವುಗಳ ಬಗ್ಗೆ ಮನಸ್ಸು ಹೆಚ್ಚು ವಿಚಾರ ಮಾಡಹತ್ತಿತು. ಆಗಿ ನಿಂದಲೇ ಇವರ ಸಾಹಿತ್ಯ ರಚನೆ ಪ್ರಾರಂಭವಾಯಿತು.

ಮೊದಲು ತ್ರಿವೇಣಿಯವರು ಸಣ್ಣಕತೆಗಳನ್ನು ಬರೆಯುಲಿಕ್ಕೆ ಪ್ರಾರಂಭಿಸಿದರು. ಒಟ್ಟು ನಾಲ್ವತ್ತೊಂದು ಸಣ್ಣ ಕತೆಗಳನ್ನು ಬರೆದು ಅವುಗಳನ್ನು ಮೂರು ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ. ಇವರ ಬರಹ ಓದುಗರನ್ನು ಆಕರ್ಷಿಸಿತು. 'ಸಮಸ್ಯೆಯ ಮಗು' ಎಂಬ ಕಥಾ ಸಂಕಲನ ರಾಜ್ಯ ಸರಕಾರದ ಬಹುಮಾನವನ್ನು ಪಡೆಯಿತು. ಇವರ ಸಣ್ಣಕಥೆಯೊಂದಕ್ಕೆ ಎಸ್. ಸಿದ್ದೇಗೌಡರ ಬಂಗಾರದ ಪದಕ ಹಾಗೂ ತಾತಯ್ಯನವರ ವಿಶೇಷ ಪಾರಿತೋಷಕಗಳು ಲಭಿಸಿದವು. ಹೀಗೆ ಬಂದ ಬಹುಮಾನಗಳು, ಜನರ ಮೆಚ್ಚಿಕೆಗಳು ತ್ರಿವೇಣಿಯವರು ಸಾಹಿತ್ಯ ಪ್ರಪಂಚದಲ್ಲಿ ದೊಡ್ಡ ಹೆಸರಾಗುವಂತೆ ಮಾಡಿದವು. ಅಲ್ಲಿಂದ ಅವರ ಬರಹ ಅತ್ಯಂತ ತೀವ್ರ ಗತಿಯಿಂದ ಸಾಗಿತು.

೧೯೫೦ರಲ್ಲಿ ತ್ರಿವೇಣಿಯವರು ತಮ್ಮ ಸಮೀಪ ಸಂಬಂಧಿ ಎಸ್. ಎನ್. ಶಂಕರ್ ಎಂಬುವವರನ್ನು ವಿವಾಹವಾದರು. ಮದುವೆಯಾದನಂತರ ಎಷ್ಟೋ ಲೇಖಕಿಯರ ಬರಹ ನಿಂತುಬಿಡುತ್ತದೆ. ಆದರೆ ತ್ರಿವೇಣಿಯವರದು ಹಾಗಾಗಲಿಲ್ಲ. ಒಳ್ಳೆಯ ಪತಿ ಅವರಿಗೆ ದೊರಕಿದ್ದರಿಂದ ಅವರ ಆಸೆಗಳು ಈಡೇರುತ್ತಾಬಂದವು. ಪತಿಯ ಪ್ರೋತ್ಸಾಹದಿಂದ ಅವರ ಸಾಹಿತ್ಯ ರಚನೆಗೆ ಹೆಚ್ಚಿನ ಚಾಲನೆ ದೊರಕಿತು.

ತ್ರಿವೇಣಿಯವರ ಮೊಟ್ಟಮೊದಲನೆಯ ಕಾದಂಬರಿ 'ಅಪಸ್ವರ' ಇದು ಅಷ್ಟು ಯಶಸ್ವಿಯಾಗದಿದ್ದರೂ ಕೂಡ ತ್ರಿವೇಣಿಯವರು ಹಿಂಜರಿಯಲಿಲ್ಲ. ಮುಂದೆ 'ಹೂವು ಹಣ್ಣು' ಕಾದಂಬರಿ

ಪ್ರಕಟವಾಯಿತು. ಕೇವಲ ಒಂದು ದಶಕದ ಅವಧಿಯಲ್ಲಿ ಇವರು ಇಪ್ಪತ್ತು ಕಾದಂಬರಿಗಳನ್ನೂ ಹಾಗೂ ಮೂರು ಕಥಾ ಸಂಕಲನ ಗಳನ್ನೂ ಕನ್ನಡ ಸಾಹಿತ್ಯಕ್ಕೆ ಕಾಣಿಕೆಯಾಗಿ ಕೊಟ್ಟರು. ಅಪೂರ್ಣವಾಗಿದ್ದ ಇವರ ಕೊನೆಯ ಕಾದಂಬರಿಯನ್ನು ಇವರ ಮಗಳಾದ ಎಂ. ಸಿ. ಪದ್ಮಾ ಪೂರ್ಣಗೊಳಿಸಿದರು.

ಒಳ್ಳೆಯ ಕಾದಂಬರಿಕಾರ್ತಿಯಾದ ತ್ರಿವೇಣಿಯವರು ಒಳ್ಳೆಯ ಗರತಿಯೂ ಆಗಿದ್ದರು, ತಾಯ್ತನಕ್ಕೆ ಹೆಚ್ಚಿನ ಬೆಲೆ ಕೊಡುತ್ತಿದ್ದರು. ತಾಯಿಯಾಗಲು ತಾವೂ ಹಂಬಲಿಸುತ್ತಿದ್ದರು. ಅವರ ಹಂಬಲವೇನೋ ಈಡೇರಿತು. ಆದರೆ ಹೆಣ್ಣು ಮಗು ವೊಂದಕ್ಕೆ ಜನ್ಮಕೊಟ್ಟ ಅವರು ಹತ್ತು ದಿನಗಳಲ್ಲಿಯೇ ಆಸ್ಪತ್ರೆ ಯಲ್ಲಿ ಕೊನೆಯುಸಿರೆಳೆದರು. ಕೇವಲ ತಮ್ಮ ೩೫ ನೆಯ ವಯಸ್ಸಿನಲ್ಲಿ (೧೯೬೩ ರಲ್ಲಿ) ತ್ರಿವೇಣಿಯವರು ಸ್ವರ್ಗಸ್ಥರಾದರು.

ತ್ರಿವೇಣಿಯವರಿಗೆ ನೃತ್ಯ, ನಾಟಕ, ಚಲನಚಿತ್ರಗಳಲ್ಲಿ ಅಪಾರ ಆಸಕ್ತಿಯಿತ್ತು. ಆಂಗ್ಲ ಸಾಹಿತ್ಯ ಹಾಗೂ ಹಿಂದಿ, ಬಂಗಾಳಿ ಸಾಹಿತ್ಯಗಳಲ್ಲಿ ಅಭಿಮಾನವಿತ್ತು. ಇವರು ಸಂಪ್ರ ದಾಯಸ್ಥ ಕುಟುಂಬದಲ್ಲಿ ಜನಿಸಿದ್ದರೂ ಧಾರ್ಮಿಕ ವಿಚಾರಗಳಲ್ಲಿ ಮೂಢ ನಂಬಿಕೆ ಇರಲಿಲ್ಲ. ವೈಚಾರಿಕವಾಗಿ, ನೈಜವಾಗಿ ಬಾಳ ಬೇಕೆಂಬುದು ಇವರ ಆಸೆ. ಜಾತಿ ಪದ್ಧತಿಯನ್ನು ಖಂಡಿಸುತ್ತಿದ್ದರು. ಎಲ್ಲರೂ ಒಂದೇ ಎಂಬ ಉದಾತ್ತ ವಿಚಾರ ಇವರದಾಗಿತ್ತು.

ಹೊಸದನ್ನು ಕಲಿಯುವ ಹಂಬಲ, ಸತತ ಪ್ರಯತ್ನ, ಓದಿನಲ್ಲಿ ಅತ್ಯಂತ ಅಭಿರುಚಿ, ಕೈಗೆತ್ತಿಕೊಂಡದ್ದನ್ನು ಕೊನೆಯ

ವರೆಗೂ ಒಯ್ಯು ಮುಟ್ಟಿಸುವ ಛಲ ಇವರಲ್ಲಿ ಕಾಣಸಿಗುವ ಗಮನಾರ್ಹ ಗುಣಗಳು. ಒಳ್ಳೆಯ ಲೇಖಕಿಯಾಗುವುದರ ಜತೆಗೆ ಶ್ರೇಷ್ಠ ಗರತಿಯಾಗಿ ಬಾಳಿ ಸಂಪ್ರದಾಯಸ್ಥ ಮನೆತನದಲ್ಲಿ ವೈಚಾರಿಕತೆಯ ಸೆಲೆ ಹರಿಸಿದರು.

ಹೀಗೆ ತ್ರಿವೇಣಿಯವರು ಒಳ್ಳೆಯ ವಿದ್ಯಾರ್ಥಿನಿಯಾಗಿ. ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡ ಬರಹಗಾರ್ತಿಯಾಗಿ. ಶ್ರೇಷ್ಠ ಕಾದಂಬರಿಕಾರ್ತಿಯಾಗಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮಹತ್ವದ ಸ್ಥಾನವನ್ನು ಪಡೆದರು.

೨. ತ್ರಿವೇಣಿಯವರ ಕಾದಂಬರಿಗಳಲ್ಲಿ

(i) ಸಾಮಾಜಿಕ ಪ್ರಜ್ಞೆ

ಸಮಾಜದಲ್ಲಿಯ ಕುಂದು–ಕೊರತೆಗಳನ್ನು. ಲೋಪದೋಷಗಳನ್ನು ತ್ರಿವೇಣಿಯವರು ತಮ್ಮ ಅನೇಕ ಕಾದಂಬರಿಗಳಲ್ಲಿ ಬಿತ್ತಿ ಹೇಳಿದ್ದಾರೆ. ಹೆಣ್ಣಿನ ಜೀವನವನ್ನು ಹೆಣ್ಣಾಗಿಯೇ ಅನುಭವಿಸಿದ ಇವರು. ಶತ–ಶತಮಾನಗಳಿಂದಲೂ ತುಳಿಯಲ್ಪಟ್ಟ ಹೆಣ್ಣಿಗೆ ಸಮಾನತೆಯ ಬದುಕು ಕಲ್ಪಿಸಲು ಯತ್ನಿಸಿದ್ದಾರೆ.

'ಕೀಲುಗೊಂಬೆ'ಯ ಕಥಾನಾಯಕಿಯಲ್ಲಿ ಮಾನಸಿಕ ತೊಳಲಾಟವಿದ್ದರೂ ವಸ್ತುವಿನ ದೃಷ್ಟಿಯಿಂದ ಇದು ಸಾಮಾಜಿಕ ಸಮ

ಸ್ಯೆಯನ್ನು ಪ್ರತಿಧ್ವನಿಸುವ ಕಾದಂಬರಿಯಾಗಿದೆ. ಅತೃಪ್ತಕಾಮದ ದಾರುಣತೆಯನ್ನು ಹೊಮ್ಮಿಸುವ ಹಾಗೂ ಮದುವೆಯಾದ ದಂಪತಿಗಳಿಗೆ ಇರಬೇಕಾದ ಲೈಂಗಿಕ ವಿಷಯದ ಪರಿಜ್ಞಾನವನ್ನು ತೋರಿಸಿಕೊಡುವ 'ಕೀಲುಗೊಂಬೆ'ಯಲ್ಲಿ ಸಮಾಜದ ಸಮಸ್ಯೆಗೆ ಪರಿಹಾರವಿದೆ. ಪ್ರಮುಖ ಸಮಸ್ಯೆಯೊಂದನ್ನು ಬಿಡಿಸುವದರಿಂದ ಕಾದಂಬರಿಗೆ ಹೆಚ್ಚಿನ ಕಳೆ ಬಂದಿದೆ.

ಪತಿಯೇ ದೇವರೆಂದು ಪಾರಂಪರ್ಯದಿಂದ, ಅಜ್ಜಿ, ತಾಯಿ–ತಂದೆಯಿಂದ ತಿಳಿದು, ಅದರಂತೆ ಪತಿಗೆ ಎಳ್ಳಷ್ಟೂ ನೋವಾಗದಂತೆ ನಡೆದು, ಕೊನೆಗೆ ಪತಿಯ ಕ್ಷಣಿಕ ಸುಖಕ್ಕೇನೇ ತನ್ನನ್ನು ಅರ್ಪಿಸಿಕೊಂಡ ತ್ಯಾಗಮಯಿ ಸೀತೆ. ಆಕೆಗೂ ಉಳಿದವರಂತೆ ಆಸೆ ಆಕಾಂಕ್ಷೆಗಳುಂಟು; ನೋಟ ಕೂಟಗಳು ಬೇಕು. ಆದರೆ ಸತಿಯೆಂದರೆ ಕೇವಲ ಭೋಗದ ವಸ್ತು, ಮನೆಯಲ್ಲಿಯ ಕೆಲಸಮಾಡಲು ಬಂದ ಸೇವಕಿ ಎಂದು ತಿಳಿದುಕೊಂಡ ಪತಿಯಿಂದಾಗಿ ಸೀತೆಯ ಬಾಳು ಅರಳುತ್ತಲೇ ಬಾಡುತ್ತದೆ. ತಾನು ಇಚ್ಛಿಸಿದಾಗ ತನಗೆ ಸೀತೆಯ ದೇಹರುಚಿ ಬೇಕು. ಅವಳಿಗೆ ನೋವಿರಲಿ, ನರಳುತ್ತಿರಲಿ ಅದರ ಗೊಡವೆ ತನಗೆ ಬೇಡ ಎನ್ನುವ ವಿಚಾರದ ಪ್ರೈಸ್ಕೂಲ ಮೇಸ್ತ್ರು ನರಹಸಿಂಹಯ್ಯ ಸೀತೆಯ ಪತಿ.

ಲೈಂಗಿಕತೆಯ ಇತಿ ಮಿತಿಯ ಬಗ್ಗೆ ಎಳ್ಳಷ್ಟೂ ಪರಿಜ್ಞಾನವಿಲ್ಲದ ಪತಿಯ ಸಂಗಡ ಬಾಳು ಸಾಗಿಸುವ ಸೀತೆ ಅಶಕ್ತತೆಯಿಂದಾಗಿ ಸಾಕಷ್ಟು ಸಲ ಮಕ್ಕಳ ಆಸೆ ಹೊತ್ತು ನಿರಾಶಳಾಗುತ್ತಾಳೆ. ಎಷ್ಟೋ ಸಲ ಅವಳಿಗೆ ಗರ್ಭಪಾತವಾದರೂ ಅದರ ಬಗ್ಗೆ ಲಕ್ಷ್ಯ

ವಹಿಸದೆ ಮತ್ತೆ ಅವಳನ್ನೇ ಬೈಯುವ ನರಸಿಂಹಯ್ಯ ಕಾದಂಬರಿಯುದ್ದಕ್ಕೂ ಪಶುಗುಣವನ್ನೇ ಹೊತ್ತು ನಿಂತಿದ್ದಾನೆ.

ಹೆಣ್ಣಿಗೂ ಒಂದು ವ್ಯಕ್ತಿತ್ವವಿದೆ: ಪ್ರೇಮ, ಪ್ರೀತಿ, ವಿಶ್ವಾಸ ಅವಳಿಗೂ ತನ್ನಂತೆ ಅವಶ್ಯ. ನೋವು ನಲಿವು ಸುಖ-ದುಃಖ ಅವಳಿಗೂ ಉಂಟು. ವಿಚಾರಿಸುವ, ನಿರ್ಧರಿಸುವ, ಬೇಡೆನ್ನುವ, ಬೇಕೆನ್ನುವ ಹಕ್ಕು ಅವಳಿಗೂ ಇದೆ ಎಂಬುದನ್ನು ಅಲ್ಲಗಳೆಯುವ ನರಸಿಂಹಯ್ಯ ಹೆಂಡತಿಯನ್ನು ಕೀಲುಗೊಂಬೆಯನ್ನಾಗಿ ಮಾಡಿಕೊಂಡು ಪಶುವಿನ ಹಾಗೆ ವರ್ತಿಸಿ ಕೊನೆಗೆ ಅವಳನ್ನು ಕಳೆದುಕೊಳ್ಳುವ ದಾರುಣಚಿತ್ರ ಇಲ್ಲಿಯ ಕಥಾವಸ್ತು.

ಮುಂದಮುಕಿಯಾದ ನರಸಿಂಹಯ್ಯನಿಗೆ ಉಳಿದವರು ಹೇಳುವ ಉಪದೇಶಗಳೆಲ್ಲಾ ವ್ಯರ್ಥ. ಕೊನೆಗೆ ತನ್ನ ಮಗ ಮಧುಸೂದನನ ಮಾತಿಗೂ ತಂದೆ ಬದಲಾಗದೆ ಕಾದಂಬರಿಯ ಕೊನೆ ಕಣ್ಣೀರಿನ ಮಡುವಾಗುತ್ತದೆ. ರೋಹಿಣಿ ಸೀತೆಯ ಮನೆಗೆ ಕೆಲಸದಾಕೆಯೆಂದು ಬಂದಾಗಿನಿಂದ ನರಸಿಂಹಯ್ಯನ ಪಾತ್ರದ ಬೆಳವಣಿಗೆ ಕುಂಠಿತವಾದಂತೆನಿಸುತ್ತದೆ. ರೋಹಿಣಿಯಂತಹ ಸುಂದರ ಹುಡುಗಿ ಮನೆಯಲ್ಲಿದ್ದಾಗ್ಯೂ ಹೆಂಡತಿ ಅನಾರೋಗ್ಯದಿಂದಿದ್ದರೂ ಯಾವುದೇ ದುಷ್ಕೃತ್ಯ ಮಾಡದೇ ಇರುವದು ಅವನ ಒಂದು ದೊಡ್ಡ ಗುಣವೆನಿಸುತ್ತದೆ. ಆದರೂ ಆತ ಓದುಗರ ಪ್ರೀತಿಗೆ ಎರವಾಗುವ ವ್ಯಕ್ತಿಯೇ ಸರಿ. ಆಸ್ಪತ್ರೆಯಲ್ಲಿಯ ಸನ್ನಿವೇಶ ವಾಸ್ತವವಾಗಿ ಮೂಡಿದೆ. ಒಟ್ಟಿನಲ್ಲಿ ಸಮಾಜದಲ್ಲಿ ಹೆಣ್ಣು ಹೇಗೆ ಗಂಡಿನ ಕೈಗೊಂಬೆಯಾಗಿ ಬಾಳುತ್ತಾಳೆಂಬುದನ್ನು ಪ್ರತಿನಿಧಿಸುವ ಕಾದಂಬರಿ ಇದು.

'ತಾವರೆಯ ಕೊಳ' ಕಾದಂಬರಿಯಲ್ಲಿಯ ಶಾಂತಾ ರಾಮಣ್ಣನ ಹೆಂಡತಿಯಾಗಿ ರಮೇಶನ ಅತ್ತಿಗೆಯಾಗಿ ಬಾಳುತ್ತಿರುವಾಗ ತಲೆನೋವಿನಿಂದ ತೀರಿಕೊಳ್ಳುತ್ತಾಳೆ. ಕೊನೆಯ ವರ್ಷದ ಎಂ. ಬಿ. ಬಿ. ಎಸ್ ಓದುತ್ತಿದ್ದ ರಮೇಶ ಅತ್ತಿಗೆಯನ್ನು ಉಳಿಸಿಕೊಳ್ಳದ್ದಕ್ಕಾಗಿ ದುಃಖಪಡುತ್ತಾನೆ. ತನ್ನ ಅತ್ತಿಗೆಗೆ ಸಹಾಯವಾಗದೇ ಇರುವ ವೈದ್ಯಕೀಯ ವೃತ್ತಿಗೆ ಶರಣು ಹೊಡೆದು ಹುಚ್ಚನಂತಾಗುತ್ತಾನೆ. ತನ್ನ ತಮ್ಮ ಈ ರೀತಿ ಹುಚ್ಚನಂತೆ ವರ್ತಿಸುವದನ್ನು ಕಂಡ ರಾಮಣ್ಣ ಹಾಗೂ ಅವನ ತಂದೆ ತಾಯಿಗಳು ರಮೇಶನನ್ನು ಬೊಂಬಾಯಿಗೆ ಕಳಿಸುತ್ತಾರೆ. ರಾಮಣ್ಣನ ಗೆಳೆಯ ಶೇಷಾದ್ರಿ ಅವನ ಹೆಂಡತಿ ರತ್ನಾ ಬೊಂಬಾಯಿಯಲ್ಲಿದ್ದುದರಿಂದ ಸ್ಥಳಬದಲಾವಣೆಯಾಗಿ ಗುಣವಾಗಬಹುದೆನ್ನುವ ವಿಚಾರದಿಂದ ರಮೇಶನನ್ನು ಕಳಿಸಿಕೊಡುತ್ತಾರೆ. ಆದರೆ ಶೇಷಾದ್ರಿ ಡಾಕ್ಟರ್. ಆತ ಮನೆಯಲ್ಲಿ ಇರುವದೇ ಕಡಿಮೆ. ರಮೇಶ ಬೊಂಬಾಯಿಗೆ ಬಂದ ನಂತರ ಕಥೆ ಹೊಸ ತಿರುವು ತೆಗೆದುಕೊಳ್ಳುತ್ತದೆ. ರತ್ನಾ ತನ್ನ ಮಾನಸಿಕ ದೌರ್ಬಲ್ಯದಿಂದ ರಮೇಶನನ್ನು ಮೋಹಗೊಳಿಸಿ ಕೂಡಿಕೊಳ್ಳುತ್ತಾಳೆ. ಈಗ ರಮೇಶನಿಗೂ ಅವಳನ್ನು ಬಿಟ್ಟು ಹೋಗುವ ಮನಸ್ಸಿಲ್ಲ. ಆದರೆ ಹೋಗುವದು ಮಾತ್ರ ತಪ್ಪುವದಿಲ್ಲ. ಇಲ್ಲಿಯ ರತ್ನಾಳ ಅನೀತಿಯ ಜೀವನಕ್ಕೆ ಅವಳ ಮಾನಸಿಕ ದೌರ್ಬಲ್ಯವೇ ಕಾರಣ. ಶೇಷಾದ್ರಿಯಂತಹ ಪತಿ ಹೆಂಡತಿಯನ್ನು ಬಹಳ ಕಾಲ ಬಿಟ್ಟಿರುವದರಿಂದ ಆಕೆ ಹೇಗೆ ಅನೀತಿಯ ಮಾರ್ಗಕ್ಕೆ ಬೀಳುತ್ತಾಳೆ ಎಂಬುದನ್ನು ಕಾದಂಬರಿಕಾರ್ತಿ ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ. ವಿದ್ಯಾವಂತನಾದ ರಮೇಶ ಗೆಳೆಯನ ಹೆಂಡತಿಯೊಂದಿಗೆ

ಪ್ರೇಮ ಸಂಬಂಧವನ್ನಿಟ್ಟುಕೊಳ್ಳುವದು ವಿಚಿತ್ರವಾಗಿದೆ. ಆದರೂ ರಮೇಶ ಹಾಗೂ ರತ್ನಾಳ ತೊಳಲಾಟ ಓದುಗರ ಮನದಲ್ಲಿ ಕಳವಳವನ್ನುಂಟುಮಾಡುತ್ತದೆ.

'ತಾವರೆಯಕೊಳ'ದ ರತ್ನಾಳಂತೆ'ಸೋತುಗೆದ್ದವಳು' ಕಾದಂಬರಿಯಲ್ಲಿ ಭಾರತಿ ಕೂಡ ಅನೀತಿಯ ಜೀವನಕ್ಕೊಳಗಾದದ್ದು ಆಕೆಯ ಮಾನಸಿಕ ದೌರ್ಬಲ್ಯದಿಂದಲೇ–ಆನಂದ. ಭಾರತಿಯರ ದಾಂಪತ್ಯ ಜೇನಿನಂತೆ ಮಧುರವಾಗಿರುವಾಗ ಮದುವೆಯಾದ ಕೆಲವು ತಿಂಗಳಿಗೆ ಆನಂದ ವ್ಯಾಸಂಗಕ್ಕೆಂದು ಎರಡು ವರ್ಷ ಇಂಗ್ಲಂಡಿಗೆ ಹೋಗುತ್ತಾನೆ.ಆನಂದನನ್ನು ಬಿಟ್ಟಿರಲಾರದ ಭಾರತಿ ವಿರಹ ಯಾತನೆಯಿಂದ ದುಗುಡ ಮನಸ್ಸಿನಿಂದ ಪತಿಯನ್ನು ಇಂಗ್ಲಂಡಿಗೆ ಕಳಿಸಿಕೊಡುತ್ತಾಳೆ. ವೇದಮ್ಮಾಳ ತಮ್ಮನಾದ ಚಂದು ಭಾರತಿಯನ್ನು ಕಂಡಾಗ ಅವಳ ಸೌಂದರ್ಯಕ್ಕೆ ಮಾರುಹೋಗುತ್ತಾನೆ. 'ಆನಂದ ಎಂತಹ ಅದೃಷ್ಟವಂತ' ಎಂದು ಉದ್ಗಾರ ತೆಗೆಯುತ್ತಾನೆ. ಚಂದು ಆಗೊಮ್ಮೆ ಈಗೊಮ್ಮೆ ಅಕ್ಕನ ಮನೆಗೆ ಬರುತ್ತಿರುತ್ತಾನೆ. ದಾಂಪತ್ಯದಲ್ಲಿ ಸ್ವಲ್ಪಮಟ್ಟಿಗೆ ಸುಖ ಪಡೆದ ಭಾರತಿಯ ಕಡಿವಾಣವಿಲ್ಲದ ಮನಸ್ಸು ಚಂದುವಿನ ಕಡೆ ವಾಲುತ್ತದೆ. ಒಂದು ದಿವಸ ಭಾರತಿಯ ಭಾವಚಿತ್ರ ತೆಗೆಯುವ ನೆವದಲ್ಲಿ ಚಂದು ಭಾರತಿಯನ್ನು ಸಮೀಪಿಸಿ ಅವಳ ಅಂಗಾಂಗಗಳ ಸ್ಪರ್ಶ ಸುಖವನ್ನು ಪಡೆಯುತ್ತಾನೆ. ಕನಸು ಕಂಡು ಎಚ್ಚತ್ತವಳಂತೆ ಭಾರತಿ ಮೋಹದ ಪಾಶದಿಂದ ಮೇಲೆದ್ದು ಚಂದುವಿನ ಕಪಾಳಕ್ಕೆ ಏಟು ಕೊಡುತ್ತಾಳೆ. ತಾನು ಮಾಡುತ್ತಿರುವದು ಸರಿಯೇ ಎಂದು ಯೋಚಿಸುತ್ತಾಳೆ. ಅವನ ಕಾಟ ತಪ್ಪಿಸಲು ತನ್ನ ತವರಿಗೆ ಹೋಗಬೇಕೆಂದರೆ ಅತ್ತೆ

ಬಚ್ಚಲಲ್ಲಿ ಕಾಲು ಜಾರಿ ಹಾಸಿಗೆ ಹಿಡಿಯುತ್ತಾಳೆ. ಬಂದು ಮತ್ತೆ ಒಂದೆರಡು ಸಲ ಭಾರತಿಯನ್ನು ಸಂಧಿಸುತ್ತಾನೆ. 'ನಾನು ನಿನ್ನನ್ನು ಪ್ರೀತಿಸ್ತೀನಿ. ನೀನಿಲ್ಲದೆ ಜೀವಿಸಲಿಕ್ಕಾಗೋದಿಲ್ಲ'ವೆಂದು ಹೇಳಿ ಒಂದು ರಾತ್ರಿ ಅವಳನ್ನು ಸಂಧಿಸುತ್ತಾನೆ, ಆಗ ಭಾರತಿ ಯಾವ ಪ್ರತಿಭಟನೆಯನ್ನೂ ಮಾಡುವದಿಲ್ಲ. ಆಗ ಅವಳಿಗೆ ಅವನ ಬಿಸಿ ಅಪ್ಪುಗೆ ಸ್ವರ್ಗವೆನಿಸುತ್ತದೆ. ಅತ್ತೆ, ಮಾವ, ಗಂಡ, ಸಮಾಜ ಯಾವುದರ ನೆನಪೂ ಬರುವದಿಲ್ಲ. ಆ ಮೇಲೆ ತಾನು ಕಾಲು ಜಾರಿ ದೆಯೆಂದು ಭಾವಿಸಿ ದೇವರ ಮನೆಯಲ್ಲಿ ಕಾಲಿಡಲು ಹಿಂಜರಿಯು ಯುತ್ತಾಳೆ, ಪಶ್ಚಾತ್ತಾಪ ಪಡುತ್ತಾಳೆ. ಆನಂದ ಸ್ವದೇಶಕ್ಕೆ ಮರಳಿ ಬಂದು ಹೆಂಡತಿಯ ಅವತಾರ ನೋಡಿ ಗಾಬರಿಗೊಂಡು ನಿಜಸ್ಥಿತಿ ಗೊತ್ತಾದಾಗ ಗದರಿಸಿ ಕೇಳುತ್ತಾನೆ "ದಾಂಪತ್ಯದ ಹೊಸ ಬಾಳಿನಲ್ಲಿ ನನಗೆ ತೃಪ್ತಿ ಸಿಕ್ಕಿರಲಿಲ್ಲ. ವಿರಹದ ಕಿಚ್ಚಿನಲ್ಲಿ ಬೆಂದು ನಿಸರ್ಗ ದೊಡನೆ ಹೋರಾಡುತ್ತಿರುವಾಗಲೇ ಆತ ಬಂದು ಹೆಜ್ಜೆ ಹೆಜ್ಜೆಗೂ ನನ್ನನ್ನು ಕೆಣಕಿದ. ಕೆರಳಿದ ಲಾಲಸೆಯನ್ನು ದಮನ ಮಾಡಲು ಯತ್ನಿಸಿದೆ. ನನ್ನ ಸಂಯಮ ಹಿಮ್ಮೆಟ್ಟಿ ನಾನು ಪತಿತೆಯಾದೆ. ಅವನೊಡನೆ ಹೋಗಲು ನಿರಾಕರಿಸಿ ನಿಮ್ಮ ಕ್ಷಮೆ ಕೇಳಲು ನಿಂತಿದ್ದೇನೆ" ಎಂದು ಅಷ್ಟೇ ಸಮಾಧಾನದಿಂದ ಉತ್ತರ ಕೊಡುತ್ತಾಳೆ. ಆಗ ಆನಂದನಿಗೆ ಲಂಡನ್ನದಲ್ಲಿ ತಾವು ಜೀವಿಸಿದ ದಿನಗಳು ನೆನ ಪಾಗುತ್ತವೆ. ತನ್ನ ದೇಹವೂ ಕೂಡ ಅವಳ ಹಾಗೇ ಪತಿತವಾದ ದ್ದೆಂದು ತಿಳಿದು ಮಹದಿ ಪಿರುತ್ತಾನೆ. ಅಷ್ಟರಲ್ಲಿ ಅವನ ತಾಯಿ "ನೀನು ಗಂಡಸು, ನಿನಗಿಷ್ಟ ಬಂದ ಹಾಗೆ ಮಾಡಬಹುದು. ಆದರೆ ಹೆಣ್ಣು ಹಾಗೆ ಮಾಡಿದರೆ ಅವಳು ಪತಿತೆ. ಅವಳಿಗೆ ಕ್ಷಮೆಯಿಲ್ಲ.

ನಾಯಿ ಮುಟ್ಟಿದ ಮಡಿಕೆಯಂತೆ ಬೀಸಾಡಬೇಕು" ಎನ್ನುತ್ತಾಳೆ. ಹೆಣ್ಣಿಗೊಂದು ನೀತಿ, ಗಂಡಿಗೊಂದು ನೀತಿ "ಇದಾವ ನ್ಯಾಯ ವೆಂದು ಆತನಿಗನ್ನಿಸುತ್ತದೆ. ಆಗ ತನ್ನ ಹೆಂಡತಿಯನ್ನು ಕ್ಷಮಿಸಿ ಸ್ವೀಕರಿಸುತ್ತಾನೆ.

ಇಲ್ಲಿ ಕಾದಂಬರಿಕಾರ್ತಿ ಸಮಾಜದಲ್ಲಿ ನಡೆಯುತ್ತಿರುವ ಒಮ್ಮುಖ ನೀತಿಯನ್ನು ಖಂಡಿಸಿದ್ದಾರೆ. ಹೆಣ್ಣಿಗೆ ಮಾತ್ರ ನೀತಿ, ಗಂಡಿಗೇಕಿಲ್ಲ? ಗಂಡಿನಂತೆ ಹೆಣ್ಣೂ ಕೂಡ ಸ್ವತಂತ್ರಳು. ಕೆಲವೊಮ್ಮೆ ಆಕೆ ದಾರಿತಪ್ಪಿದರೆ ಗಂಡನಾದವ ಕೂಲಂಕಷವಾಗಿ ವಿಚಾರಿಸಿ ಅವಳನ್ನು ಮನ್ನಿಸಿ ಆಕೆಗೆ ಹೊಸಜೀವನ ಕಲ್ಪಿಸಿ ಕೊಡಬೇಕೆಂಬು ದನ್ನು ಆನಂದನ ಪಾತ್ರದ ಮೂಲಕ ಸಮಾಜಕ್ಕೆ ತಿಳಿಯಪಡಿಸಿ ದ್ದಾಳೆ. ತನ್ನಲ್ಲಿ ನೂರಾರು ತಪ್ಪುಗಳನ್ನಿಟ್ಟುಕೊಂಡು ಹೆಂಡತಿ ಯನ್ನು ಬಹಿಷ್ಕರಿಸುವದು ಸರಿಯಲ್ಲವೆಂದು ತಿಳಿದ ಆನಂದ ಮಾತ್ರ ಹೆಂಡತಿಗೆ ಹೊಸ ಬದುಕು ಕಲ್ಪಿಸಿಕೊಡುತ್ತಾನೆ. ಭಾರತಿ ಒಂದು ವಿಷ ಘಳಿಗೆಯಲ್ಲಿ ಅನೀತಿಗೊಳಗಾಗಿ ಪಶ್ಚಾತ್ತಾಪ ಪಡು ತ್ತಾಳೆ. ತನ್ನ ತಪ್ಪನ್ನು ಬಹಿರಂಗ ಪಡಿಸಿ ಗಂಡನಲ್ಲಿ ಕ್ಷಮೆಯಾಚಿ ಸುತ್ತಾಳೆ. ಮಾನಸಿಕ ದೌರ್ಬಲ್ಯದಿಂದ ಎಡವಿದ ಹೆಂಡತಿಯನ್ನು ಮೇಲೆತ್ತುತ್ತಾನೆ ಆನಂದ. ಅಂತೆಯೇ ಆಕೆ ತನ್ನ ನೀತಿಯನ್ನುಳಿಸಿ ಕೊಳ್ಳುವದರಲ್ಲಿ ಸೋತರೂ ಬದುಕಿನಲ್ಲಿ ಗೆಲ್ಲುತ್ತಾಳೆ. ಈ ರೀತಿ ಹೆಣ್ಣು ಗಂಡುಗಳ ನೀತಿ ಅನೀತಿಯ ವಿಚಾರವನ್ನು ಈ ಕಾದಂಬರಿ ಯಲ್ಲಿ ಬಹು ಮಾರ್ಮಿಕವಾಗಿ ನಿರೂಪಿಸಲಾಗಿದೆ.

'ಅವಳ ಮನೆ' ಕಾದಂಬರಿಯಲ್ಲಿ ಬಡತನದ ದಾರುಣ

ಚಿತ್ರಣವಿದೆ. ಸುಬ್ಬಣ್ಣ ಹಾಗೂ ಭಾಗ್ಯಮ್ಮ ದಂಪತಿಗಳಿಗೆ ಐದು ಜನ ಮಕ್ಕಳು. ಕಡುಬಡತನದಿಂದ ಬಳಲುತ್ತಿದ್ದ ಅವರು ತಮ್ಮ ಐದು ಮಕ್ಕಳಲ್ಲಿ ಒಬ್ಬಳಾದ ಸರೋಜಸಿಯನ್ನು ಐಶ್ವರ್ಯವಂತ ರಾದ ರಾಮಸ್ವಾಮಯ್ಯ ಹಾಗೂ ನಾಗಮ್ಮ ದಂಪತಿಗಳ ಮನೆಗೆ ದಾನವಾಗಿ ಕೊಡುತ್ತಾರೆ. ಸರೋಜಾ ಸುಖದ ಸುಪ್ಪತ್ತಿಗೆಯಲ್ಲಿ ದ್ದರೂ ಅದೊಂದು ಬಂಧನವೆನಿಸುತ್ತದೆ. ಪ್ರತಿಯೊಂದು ಕೆಲಸಕ್ಕೆ ಕಟ್ಟಪ್ಪಣೆ, ಸ್ವಾತಂತ್ರ್ಯವಿರುವದಿಲ್ಲ. ನರಸೀಪುರದ ಪುಂಡ ಹುಡುಗಿ ಮೈಸೂರಿನಲ್ಲಿ ಪಳಗಿದ ಕಾಡುಪ್ರಾಣಿಯಾಗುತ್ತಾಳೆ. ತಾನು ಬೆಳೆ ದಿದ್ದ ವಾತಾವರಣಕ್ಕೂ ಬೆಳೆಯುತ್ತಿದ್ದ ವಾತಾವರಣಕ್ಕೂ ಉತ್ತರ ದಕ್ಷಿಣ ಧ್ರುವಗಳ ಅಂತರ. ಎಷ್ಟೇ ಮುದ್ದಾಗಿ ಬೆಳಸಿದರೂ ಸಾಕಿದ ತಾಯಿ ಹೆತ್ತ ತಾಯಿಯ ಸ್ಥಾನಪಡೆಯಲಾರಳೆಂಬುದನ್ನು ನಾಗಮ್ಮನ ಪಾತ್ರದ ಮೂಲಕ ತ್ರಿವೇಣಿಯವರು ವ್ಯಕ್ತಪಡಿಸಿ ದ್ದಾರೆ.

ಸಾಕಿದ ಮಕ್ಕಳು ನಾವು ಹೇಳಿದಂತೆ ಕೇಳಬೇಕು. ಕೇವಲ ಸೂತ್ರದ ಗೊಂಬೆಯಂತಿರಬೇಕೆನ್ನುವ ವಿಚಾರವುಳ್ಳ ರಾಮ ಸ್ವಾಮಯ್ಯನಂಥವರು ಸಮಾಜದಲ್ಲಿ ಅನೇಕರಿದ್ದಾರೆಂಬುದನ್ನು ನಾವು ಕಾಣಬಹುದು. ಪ್ರತಿಯೊಬ್ಬರಿಗೂ ವ್ಯಕ್ತಿ ಸ್ವಾತಂತ್ರ್ಯವಿದೆ ಯೆಂಬುದನ್ನು ಕಾದಂಬರಿಕಾರ್ತಿ ಸರೋಜಳ ಪಾತ್ರದ ಮುಖಾಂ ತರ ಸ್ಪಷ್ಟಪಡಿಸಿದ್ದಾರೆ.

ಶ್ರೀಮಂತ ಹೆಣ್ಣೊಬ್ಬಳ ದುರಂತವನ್ನೊಳಗೊಂಡ ಕಥೆ 'ಬೆಳ್ಳಿಮೋಡ' ಕಾದಂಬರಿಯಲ್ಲಿದೆ. ಸದಾಶಿವರಾಯ ಹಾಗೂ

ಲಲಿತಮ್ಮ ಇವರ ಏಕೈಕ ಅಚ್ಚು ಮೆಚ್ಚಿನ ಮಗಳು ಇಂದಿರಾಗೆ ಸದಾಶಿವರಾಯರ ಕಡೆ ಕೆಲಸಕ್ಕಾಗಿ ಬಂದ ಮೋಹನನೊಡನೆ ಪರಿಚಯವಾಗುತ್ತದೆ. ಪರಿಚಯದಿಂದ ಸ್ನೇಹ, ಮುಂದೆ ಮದುವೆ ಮಾಡಿಕೊಳ್ಳುವ ನಿರ್ಧಾರ ಮಾಡುತ್ತಾಳೆ. ಇಂದಿರಾಳ ಆಸ್ತಿಯನ್ನು ತಾವು ಪಡೆಯುತ್ತೇವಲ್ಲಾ ಎಂಬ ಆಸ್ತಿಯ ಆಸೆಗೆ ಬಿದ್ದು ಒಪ್ಪಿದ ಮೋಹನನ ತಂದೆತಾಯಿಗಳು ಇಂದಿರಾಗೆ ಒಬ್ಬ ತಮ್ಮ ಹುಟ್ಟಿದಾಗ ಮದುವೆ ಬೇಡವೆನ್ನುತ್ತಾರೆ. ಅದಕ್ಕೆ ಮೋಹನನೂ ಅದೇ ಹಾಡು ಹಾಡುತ್ತಾನೆ. ಕಾಲು ಜಾರಿ ಬಿದ್ದುದರಿಂದ ಮೋಹನ ಆರೈಕೆಗಾಗಿ ಇಂದಿರಾಳ ಮನೆಯಲ್ಲಿಯೇ ಉಳಿಯುತ್ತಾನೆ. ಆಗ ಅಲ್ಲಿ ಇಂದಿರಾಳ ದೊಡ್ಡಗುಣವನ್ನು ಕಂಡು ಮತ್ತೆ ಆಕೆಯನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಆಗ ಆಕೆ ಒಪ್ಪುವದಿಲ್ಲ. ನಿನ್ನನ್ನು ಸೋದರ ವಾತ್ಸಲ್ಯದಿಂದ ಕಾಣುತ್ತೇನೆ ಎಂದು ಬಿಡುತ್ತಾಳೆ. ಯಾವ ಚಿಂತೆಯಿಲ್ಲದೆ ಹಕ್ಕಿಯಂತೆ ಸ್ವತಂತ್ರಳಾಗಿ, ಸ್ವಚ್ಛಂದಳಾಗಿ ಬೆಳೆದ ಇಂದಿರಾ ಜೀವನದ ಒಮ್ಮುಖ ನೋಡಿದವಳು, ಎರಡನೆಯ ಮುಖವನ್ನು ಕಂಡು ಮದುವೆ ಪ್ರೀತಿ ಸಂಸಾರ ಇವುಗಳಿಗೆ ಅರ್ಥವೇ ಇಲ್ಲವೆಂದು ಭಾವಿಸುತ್ತಾಳೆ.

ಸುಂದರಿಯಲ್ಲದಿದ್ದರೂ ಕುರೂಪಿಯಲ್ಲದ ಯುವತಿಯೊಬ್ಬಳು ಅವಿವಾಹಿತಳಾಗಿದ್ದಾಗಲೇ ಕಾಲುಜಾರಿ, ಕೊಲೆಯ ಆಪಾದನೆಯಿಂದ ಜೈಲು ಸೇರಿ ದುರಂತ ಮರಣವನ್ನಪ್ಪಿದ ಕಥೆಯನ್ನೊಳಗೊಂಡ 'ಮೊದಲಹೆಜ್ಜೆ' ಕಾದಂಬರಿಯಲ್ಲಿ ಸಾಮಾಜಿಕ ವಸ್ತು ಒಳ್ಳೇ ಯಥಾವತ್ತಾಗಿ ಚಿತ್ರಿಸಲ್ಪಟ್ಟಿದೆ.

ತ್ರಿವೇಣಿಯವರ ಮೊದಲನೆಯ ಕಾದಂಬರಿ 'ಅಪಸ್ವರ'ದಲ್ಲಿ ಬರುವ ಮೀರಾ ಬಾಲ್ಯದಿಂದಲೇ ಓದುವದರಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವಳಿರುತ್ತಾಳೆ.ನಾಟಕದಲ್ಲಿ ಒಳ್ಳೇ ಅಭಿರುಚಿಯುಳ್ಳ ಅವಳಿಗೆ ವೈದ್ಯಳಾಗಬೇಕೆಂಬ ಹಿರಿಯಾಸೆ. ಆದರೆ ಮನೆಯವರು ಒತ್ತಾಯ ಮಾಡಿ ಮೀರಾಳನ್ನು ಹಳ್ಳಿಯಲ್ಲಿ ಹೊಲಗದ್ದೆ ಮಾಡಿಕೊಂಡಿರುವ ಶ್ಯಾಮನಿಗೆ ಕೊಟ್ಟು ಮದುವೆ ಮಾಡುತ್ತಾರೆ. ಅಂತೂ ಮೀರಾಳ ಸಂಸಾರ ಹಳ್ಳಿಯ ಬೇಸರದಿಂದ ಸಾಗುತ್ತಿರುವಾಗ ಆಕೆ ಗರ್ಭವತಿ ಯಾಗಿ ಬದುಕಿನಲ್ಲಿ ಆಸೆಯ ಹೊಸ ಅಲೆಯೊಂದು ಮೂಡುತ್ತದೆ. ಆದರೆ ದೈವ ಅದಕ್ಕೆ ಅಡ್ಡಬಂದು ಮೀರಾಳಿಗೆ ಜನಿಸಿದ ಮಗು ವನ್ನು ಕಸಿದುಕೊಳ್ಳುತ್ತದೆ. ಆ ಹಳ್ಳಿಯಲ್ಲಿ ಸರಿಯಾದ ವೈದ್ಯರು ಸಿಗದೇ ಇದ್ದುದಕ್ಕೇನೇ ತನ್ನ ಮಗು ತೀರಿಹೋಯಿತಲ್ಲಾ ಎಂದು ವಿಚಾರಿಸಿದ ಮೀರಾ ಗಂಡನ ಅಪ್ಪಣೆ ಪಡೆದು ಮೆಡಿಕಲ್ ಓದಲು ಪಟ್ಟಣಕ್ಕೆ ಹೋಗುತ್ತಾಳೆ.

'ಅಪಸ್ವರ' ಕಾದಂಬರಿಯ ಮುಂದಿನ ಭಾಗವೇ 'ಅಪಜಯ'. ಮೀರಾ ತನ್ನ ಸಂಬಂಧಿಕರಲ್ಲಿ ಹೆಣ್ಣು ತಂದು ಶ್ಯಾಮನಿಗೆ ಮದುವೆ ಮಾಡಿ ತಾನು ಮೆಡಿಕಲ್ ಕಲಿಯಲು ಹೋಗುತ್ತಾಳೆ. ಮೆಡಿಕಲ್ ಓದುವದು ಮುಗಿದ ನಂತರ ವೈದ್ಯಳಾಗಿ ಪಟ್ಟಣದಲ್ಲಿಯೇ ಇರ ಬೇಕೆಂದು ತೀರ್ಮಾನಿಸಿರುತ್ತಾಳೆ. ಆದರೆ ಶ್ಯಾಮನ ಒತ್ತಾಯಕ್ಕೆ ಬಿದ್ದು ಮತ್ತೆ ಹಳ್ಳಿಗೆ ಬರುತ್ತಾಳೆ- ಅಲ್ಲಿಯೇ ಆಸ್ಪತ್ರೆ ತೆಗೆಯ ಲೆಂದು. ಆದರೆ ಶ್ಯಾಮನ ಎರಡನೆಯ ಹೆಂಡತಿಗೂ ಈಕೆಗೂ ನಡೆ ಯದೇ ಇರುವದರಿಂದ ಅಲ್ಲಿ ಇರಲು ಸಾಧ್ಯವಾಗದೆ ಹಳ್ಳಿ ಬಿಟ್ಟು ಪಟ್ಟಣಕ್ಕೆ ಬರುತ್ತಾಳೆ. ಇದೇ 'ಅಪಜಯ' ಕಾದಂಬರಿಯ ಕಥಾ

ವಸ್ತು. ಪರಸ್ಪರ ಗಂಡು-ಹೆಣ್ಣು ಒಂದನ್ನೊಂದೊಪ್ಪದೆ ಹಿರಿಯರ ಬಲಾತ್ಕಾರಕ್ಕಾಗಿ ಮದುವೆಯಾಗುವದರಿಂದ, ಸಂಸಾರಗಳು ಹೇಗೆ ಹಾಳಾಗುತ್ತವೆ: ಬದುಕಿನಲ್ಲಿ ಹೇಗೆ ಅಸಹನೀಯವಾಗುತ್ತದೆ ಎನ್ನುವದನ್ನು ಕಾದಂಬರಿಕಾರ್ತಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ ಈ ಎರಡೂ ಕಾದಂಬರಿಗಳಲ್ಲಿ.

ಆರು ಮಂದಿ ವಿದ್ಯಾರ್ಥಿನಿಯರು ಕಂಕಣತೊಟ್ಟು ಮುಕ್ತಿಪಡೆದುದು 'ಕಂಕಣ' ಹಾಗೂ (ಅದರ ಮುಂದಿನ ಭಾಗವಾದ) 'ಮುಕ್ತಿ' ಕಾದಂಬರಿಗಳ ಕಥಾವಸ್ತು. ಇಲ್ಲಿ ಆ ವಿದ್ಯಾರ್ಥಿನಿಯರ ಧೈರ್ಯ ಅವರ ಅಚಲ ಹೋರಾಟ ಉಳಿದವರಿಗೆ ಅನುಕರಣೀಯವಾಗಿವೆ. ಹುಡುಗಿಯರಾದರೂ ಅವರ ಸತತ ಪ್ರಯತ್ನದಿಂದ ಯಶಸ್ವಿಯಾಗುವ ಅವರ ದಿಟ್ಟ ಧ್ಯೇಯಧೋರಣೆಗಳಿಂದ ಕಾದಂಬರಿಗಳು ಹೆಚ್ಚಿನ ಅರ್ಥವನ್ನು ಕೊಡುತ್ತವೆ.

ಗಂಡ ಸತ್ತನಂತರ ಬಡತನಕ್ಕೆ ತುತ್ತಾದ ಹೆಣ್ಣೊಬ್ಬಳು ಪರಿಸರದ ಒತ್ತಡದಿಂದ ವೇಶ್ಯಾವೃತ್ತಿಗೆ ಇಳಿಯುತ್ತಾಳೆ. ಹೆಣ್ಣನ್ನು ಅನೀತಿಯ ಜೀವನದತ್ತ ನಡೆಸುವದು, ದೈಹಿಕ ಸುಖಾಪೇಕ್ಷೆ ಹಾಗೂ ದಾರಿದ್ರ್ಯ, ಇದು 'ಹೂವು ಹಣ್ಣು' ಕಾದಂಬರಿಯ ಕಥಾವಸ್ತು. ಗಂಡನಿರುವವರೆಗೆ ಅತನೊಡಗೂಡಿ ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು ಬದುಕುತ್ತಿದ್ದ ರಮಾ ಗಂಡ ಸತ್ತನಂತರ ಅನಿವಾರ್ಯವಾಗಿ ಅನೀತಿಯ ಮಾರ್ಗ ಹಿಡಿಯುತ್ತಾಳೆ. ಹೆಣ್ಣಿನ ಅನೀತಿ ಜೀವನಕ್ಕೆ ಸಮಾಜ ಹೇಗೆ ಹೊಣೆಯಾಗುತ್ತದೆಂಬುದನ್ನು ಕಾದಂಬರಿಕಾರ್ತಿ ಒಳ್ಳೇ ವಿಡಂಬನಾತ್ಮಕವಾಗಿ

ಚಿತ್ರಿಸಿದ್ದಾರೆ. ರಮಾ ವೇಶ್ಯೆಯಾಗಬೇಕಾದರೆ ಅವಳ ಸುತ್ತಮುತ್ತ ಲಿನ ಪರಿಸರ ಬಹಳಷ್ಟು ಕಾರಣವಿದೆ ಎಂಬುದನ್ನು ಸೂಚಿಸುವ ಈ ಕಾದಂಬರಿಯಿಂದ ಸಮಾಜ ಕಲಿಯಬೇಕಾದದ್ದು ಸಾಕಷ್ಟಿದೆ ಎಂಬುದು ಮನದಟ್ಟಾಗುತ್ತದೆ. ನಿರೂಪಣೆಯಲ್ಲಿ ಅಲ್ಲಲ್ಲಿ ಕೃತಕತೆ ಕಂಡು ಬಂದರೂ ಕಥಾವಸ್ತು ಮಾತ್ರ ಬಹಳ ಶಕ್ತಿಯುತವಾಗಿದೆ.

ವಿಧವಾ ಸಮಸ್ಯೆಯನ್ನೊಳಗೊಂಡಿದ್ದರೂ ತಿಳಿಹಾಸ್ಯವನ್ನು ಸೂಸುವ 'ಹಣ್ಣೆಲೆ ಚಿಗುರಿದಾಗ' ಕಾದಂಬರಿಯಲ್ಲಿ ಪಾತ್ರಗಳೆಲ್ಲಾ ವಾಸ್ತವವಾಗಿ ಮೂಡಿಬಂದಿವೆ. ವಿಧವೆ ಮತ್ತು ಅವಳ ಸಮಸ್ಯೆಗಳನ್ನು ನಿರೂಪಿಸುವ ಸಾಮಾಜಿಕ ವಸ್ತುವನ್ನೊಳಗೊಂಡ ಒಳ್ಳೆಯ ಕಾದಂಬರಿ ಇದು ಎಂದು ಹೇಳಬಹುದು. 'ಅವಳ ಮಗಳು' ಕಾದಂಬರಿಯಲ್ಲೂ ಕೂಡ ಸಾಮಾಜಿಕ ವಸ್ತುವನ್ನು ಕಾಣಬಹುದು.

ತ್ರಿವೇಣಿಯವರು ಕಾಲೇಜದಲ್ಲಿ ಮನೋವಿಜ್ಞಾನವನ್ನು ಓದಿದವರಾದ್ದರಿಂದ ಸಮಾಜದಲ್ಲಿಯ ಪ್ರತಿಯೊಂದು ವಸ್ತುವನ್ನೂ ಅವರು ಬಹಳ ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಗಂಡ ಹೆಂಡತಿಯರಲ್ಲಿಯ ವಿರಸ, ಹದಗೆಟ್ಟ ಪರಿಸರದಿಂದಾಗುವ ಹಾನಿಗಳು, ನೀತಿ ಅನೀತಿಯ ಪ್ರಶ್ನೆ, ಹೆಣ್ಣಿನ ಶೋಷಣೆ ಬಡತನ, ವೇಶ್ಯಾ ಸಮಸ್ಯೆ, ಹೀಗೆ ಹಲವಾರು ಸಮಸ್ಯೆಗಳನ್ನೆತ್ತಿಕೊಂಡು ಚಿತ್ರಿಸಿ, ಅವುಗಳಿಗೆ ಕೆಲವೊಂದು ಸಲ ಸಮರ್ಪಕವಾದ ಪರಿಹಾರ ಸೂಚಿಸುತ್ತಾ ಹೋಗಿದ್ದಾರೆ. ಈ ರೀತಿಯಾಗಿ ಅವರ ಕಾದಂಬರಿಗಳಲ್ಲಿ ಹೆಚ್ಚು ಸಂಖ್ಯೆಯ ಕಾದಂಬರಿಗಳು ಸಾಮಾಜಿಕ ಪ್ರಜ್ಞೆಯನ್ನೊಳಗೊಂಡಿವೆ ಎಂದು ಹೇಳಬಹುದು.

(ii) ಮಾನಸಿಕ ತೊಳಲಾಟ

ಮನಶ್ಶಾಸ್ತ್ರವನ್ನೇ ಮುಖ್ಯ ವಿಷಯವನ್ನಾಗಿ ಆಯ್ದುಕೊಂಡು ಬಿ. ಎ. ಪದವಿ ಪಡೆದ ತ್ರಿವೇಣಿಯವರು ಹೆಚ್ಚಿನ ಕಾದಂಬರಿಗಳಲ್ಲಿ ಮನಶಾಸ್ತ್ರದ ಬಗ್ಗೆ ಪ್ರಸ್ತಾಪಿಸಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಅವರ 'ಶರಪಂಜರ' 'ಬೆಕ್ಕಿನ ಕಣ್ಣು'. 'ಮುಚ್ಚಿದಬಾಗಿಲು' ಮತ್ತು 'ದೂರದಬೆಟ್ಟ' ಈ ಎಲ್ಲಾ ಕಾದಂಬರಿಗಳಲ್ಲೂ ಮಾನಸಿಕ ತೊಳಲಾಟವನ್ನು ಚಿತ್ರಿಸುವುದೇ ಲೇಖಕಿಯ ಗುರಿಯಾಗಿದೆ.

'ಶರಪಂಜರ' ತ್ರಿವೇಣಿಯವರ ಶ್ರೇಷ್ಠಕಾದಂಬರಿ. ಸಂಪೂರ್ಣವಾಗಿ ಮನಶ್ಶಾಸ್ತ್ರದ ಬಗೆಗೆ ಸಂಬಂಧಿಸಿದಂತಹ ಈ ಕಾದಂಬರಿ ಬಹಳ ಸ್ವಾಭಾವಿಕವಾಗಿ ಮೂಡಿಬಂದಿದೆ. ಕಾವೇರಿಯನ್ನು ಮೆಚ್ಚಿ ಮದುವೆಯಾದ ಸತೀಶನ ಬದುಕು ಸುಖಮಯವಾಗಿರುತ್ತದೆ. ಆದರೆ ಕಾವೇರಿ ಮೊದಲನೆಯ ಮಗುವಿಗೆ ಜನ್ಮಕೊಟ್ಟ ನಂತರ ಅವಳಿಗೆ ಹಿಂದಿನ ಯಾವುದೋ ಒಂದು ದುರಂತ ಘಟನೆಯಿಂದ ಮಾನಸಿಕ ತಾಕಲಾಟವಾಗಿ ಹುಚ್ಚು ಹಿಡಿಯುತ್ತದೆ. ಆಗ ಅವಳನ್ನು ಆಸ್ಪತ್ರೆಗೆ ಸೇರಿಸುತ್ತಾರೆ. ಎರಡು ವರ್ಷ ಆಸ್ಪತ್ರೆಯಲ್ಲಿದ್ದ ಕಾವೇರಿ ಗುಣಮುಖಿಯಾಗಿ ಮನೆಗೆ ಬರುತ್ತಾಳೆ. ಆಗಲೂ ಕೂಡ ಪ್ರತಿಯೊಬ್ಬರೂ ಆಕೆಯನ್ನು ಹುಚ್ಚಿ ಎಂದೇ ಪರಿಗಣಿಸುತ್ತಾರೆ. ಹೀಗಾಗಿ ಆಕೆಗೆ ತಾನು ಮೊದಲಿನ ಕಾವೇರಿಯಾಗಿ ಬಾಳಲು ಸಾಧ್ಯವಾಗದೇ ಹೋಗುತ್ತದೆ. ತನ್ನ ಮನೆಯವರು, ಆಳುಗಳು, ಸಮಾಜ, ಪತಿ ಹೀಗೆ ಎಲ್ಲರೂ ಅದೇ ದೃಷ್ಟಿಯಿಂದ ಅವಳನ್ನು ಕಾಣುವುದರಿಂದ ಆಕೆಯ ಮನಸ್ಸಿನ ಮೇಲೆ ಮತ್ತಷ್ಟು ಆಘಾತ

ವಾಗುತ್ತದೆ. "ನೀ ಸತ್ತರೆ ನಾನು ಬದುಕುವದಿಲ್ಲ" ಎಂದು ಹೇಳಿದ್ದ ಪತಿ ಸತೀಶ ಈಗ ಕಾವೇರಿಯನ್ನು ತಾತ್ಸಾರದಿಂದ ಕಂಡು ತನ್ನ ಆಫೀಸದಲ್ಲಿಯ ಟೈಪಿಸ್ಟ್ ವಿಮಲಳೊಡನೆ ದೇಹ ಸಂಬಂಧವನ್ನಿಟ್ಟುಕೊಳ್ಳುತ್ತಾನೆ. ಇದು ಕಾವೇರಿಯ ಮೇಲೆ ಹೆಚ್ಚಿನ ಪ್ರಭಾವವಾಗಿ ಆಕೆಯ ಮನಸ್ಸು ಮತ್ತಷ್ಟು ದುಗುಡಗೊಳ್ಳುದೆ.

ಒಬ್ಬ ವ್ಯಕ್ತಿ ಒಂದು ಸಲ ಹುಚ್ಚಾಸ್ಪತ್ರೆಗೆ ಹೋಗಿಬಂದರೆ ಸಮಾಜ ಆಕೆಯನ್ನು ಅದೇ ದೃಷ್ಟಿಯಿಂದ ಕಂಡು ಮತ್ತಷ್ಟು ಅವಳನ್ನು ಹುಚ್ಚಿಯನ್ನಾಗಿ ಹೇಗೆ ಮಾಡುತ್ತದೆ ಎಂಬುದಕ್ಕೆ 'ಶರಪಂಜರ' ಕಾದಂಬರಿಯೇ ಸಾಕ್ಷಿ. ಇಲ್ಲಿಯ ಎಲ್ಲ ಪಾತ್ರಗಳೂ ಆಕೆಗೆ ಒಂದೊಂದು ಬಾಣಗಳಾಗಿ ನಾಟುವದನ್ನು ಕಾದಂಬರಿ ಕಾರ್ತಿ ಬಹಳ ಸೂಕ್ಷ್ಮವಾಗಿ ಮತ್ತು ಅಷ್ಟೇ ವಾಸ್ತವವಾಗಿ ಚಿತ್ರಿಸಿದ್ದಾರೆ. ಕಾವೇರಿಯ ಬಗ್ಗೆ ಕನಿಕರ ಪಡುವವರು ಯಾರೂ ಇಲ್ಲ. ಅವಳನ್ನು ಹುಚ್ಚಿಯೆಂದೇ ಎಲ್ಲರೂ ಪರಿಗಣಿಸುವವರು. ಇಂತಹ ಪರಿಸರದಲ್ಲಿರುವವರಿಗೆ ನಿಜವಾಗಿಯೂ ಇದ್ದ ಹುಚ್ಚು ಹೆಚ್ಚಾಗುವದರಲ್ಲಿ ಸಂಶಯವೇ ಇಲ್ಲವೆಂಬುದನ್ನು ಕಾದಂಬರಿ ಸ್ಪಷ್ಟಪಡಿಸುತ್ತದೆ. "ನನಗೆ ಬಾಳೋಕೆ ನೀವು ಒಂದು ಅವಕಾಶನೂ ಕೊಡಲಿಲ್ಲ. ಒಂದೇ ಒಂದು ಅವಕಾಶ ಕೊಡಬೇಕಾಗಿತ್ತು ಒಂದೇ ಒಂದು" ಎಂದು ಕಾತರಿಸುವ ಅವಳ ಧ್ವನಿಯಲ್ಲಿ ಉನ್ಮಾದವಿದೆ, ಕಳಕಳಿಯಿದೆ, ಅನುಕಂಪವಿದೆ. ಆಕೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಈ ಹದಗೆಟ್ಟ ಪರಿಸರ ಕೊನೆಗೂ ಆಕೆಯ ಬದುಕನ್ನು ದುರಂತದೊಂದಿಗೇ ಕೊನೆಗೊಳಿಸುತ್ತದೆ. 'ಶರಪಂಜರ'ವು ಚಲನ ಚಿತ್ರವೂ ಆಗಿದೆ.

'ಬೆಕ್ಕಿನ ಕಣ್ಣು' ಕಾದಂಬರಿಯಲ್ಲಿಯೂ ಕೂಡ ಕುಸುಮಾಳ ದಾರುಣ ಚಿತ್ರ ಕಣ್ಣುಕಟ್ಟುವಂತಿದೆ. ಕುಸುಮಾ ಜಗನ್ನಾಥರಾಯರ ಮೊದಲನೆಯ ಹೆಂಡತಿಯಾದ ರಾಜಮ್ಮನ ಮಗಳು. ರಾಜಮ್ಮ ತೀರಿಕೊಂಡನಂತರ ತಾಯಿಯನ್ನು ಕಳೆದುಕೊಂಡ ಕುಸುಮಾಳಿಗೆ ತಂದೆಯೇ ತಾಯಿಯಾಗಿ ಪೋಷಿಸುತ್ತಾನೆ. ಹೆಂಡತಿ ಸತ್ತ ಮೂರುವರ್ಷಗಳ ನಂತರ ಲಕ್ಷ್ಮಣರಾಯರ ಒತ್ತಾಯಕ್ಕೆ ಬಿದ್ದು ಅವರ ಮಗಳು ಪದ್ಮಾಳನ್ನು ಮದುವೆಯಾಗುತ್ತಾನೆ ಜಗನ್ನಾಥರಾಯ. ಬಹಳ ಸಲುಗೆಯಿಂದ ಬೆಳೆದ ಕುಸುಮಾಳಿಗೆ ಬೆಕ್ಕು–ನಾಯಿಗಳೆಂದರೆ ಪಂಚಪ್ರಾಣ. ಅಂತೆಯೇ ತಂದೆಗೆ ಹೇಳಿ ಪಾಲಿ, ಜಿಮ್ಮಿಯನ್ನು ತರಿಸಿಕೊಂಡು ಸಾಕಿದ್ದಳು. ಪಾಲಿ ಹೆಸರಿನ ಬೆಕ್ಕು ಅವಳ ಅಚ್ಚುಮೆಚ್ಚಿನ ಗೆಳತಿಯಾಗಿತ್ತು. ಪದ್ಮಾ ಚಿಕ್ಕಮ್ಮಳಾಗಿ ಆ ಮನೆಗೆ ಬಂದಾಗ ಕುಸುಮಾಳ ದೃಷ್ಟಿಕೋನವೇ ಬೇರೆಯಾಯಿತು. ಮಲತಾಯಿಯಾದ ಪದ್ಮಾ ಕುಸುಮಾಳನ್ನು ತಾತ್ಸಾರದಿಂದ ಕಾಣುತ್ತಿದ್ದಳು. ಕುಸುಮಾಳ ಮೇಲಿದ್ದ ತಂದೆಯ ಮಮತೆ ಈಗ ಉಳಿಯಲಿಲ್ಲ. ಪದ್ಮಾಳ ಹಚ್ಚನ್ನ ಕಣ್ಣುಗಳನ್ನು ಕಂಡ ಕುಸುಮಾಳಿಗೆ ಎಲ್ಲಿಲ್ಲದ ಸಿಟ್ಟು. ತಾನು ಅತ್ಯಂತ ಪ್ರೀತಿಯಿಂದ ಸಾಕಿದ ಬೆಕ್ಕಿನ ಕಣ್ಣಿನ ಹಾಗಿರುವ ಪದ್ಮಾಳ ಕಣ್ಣುಗಳನ್ನು ಕಂಡರೆ ಕುಸುಮಾಳಿಗಾಗದು.ಅಂತೆಯೇ 'ಪಾಲಿ'ಯನ್ನು ಕುಸುಮಾ ಅತ್ಯಂತ ತಿರಸ್ಕಾರದಿಂದ ನೋಡಹತ್ತಿದಳು. ಸಣ್ಣ ಹುಡುಗರ ಮನಸ್ಸು ಎಷ್ಟು ಸೂಕ್ಷ್ಮವಾಗಿರುತ್ತದೆ. ಅವರ ಮಾನಸಿಕ ತಾಕಲಾಟ ಹೇಗಿರುತ್ತದೆ ಎಂಬುದನ್ನು 'ಬೆಕ್ಕಿನ ಕಣ್ಣು' ಕಾದಂಬರಿ ಚಿತ್ರಿಸುತ್ತದೆ.

ತನ್ನ ಮಲತಾಯಿ ಹೊಡೆಯುವದು. ಬೈಯುವದು. ತಿರಸ್ಕಾರದಿಂದ ನೋಡುವದು ಕುಸುಮಾಳ ಮನಸ್ಸಿನ ಮೇಲೆ ಬಲವಾದ ಪರಿಣಾಮ ಬೀರಿದವು. ಅಂದಿನಿಂದಲೇ ಆಕೆ ಚಿಕ್ಕಮ್ಮನನ್ನು ಕಂಡರೆ ಸೇರದಾಗುತ್ತಾಳೆ. ಅಷ್ಟೇ ಅಲ್ಲ ಈ ರೀತಿಯ ಜೀವನದಿಂದ ಅವಳಿಗೆ ಹುಚ್ಚೇ ಹಿಡಿಯುತ್ತದೆ. ಕಾದಂಬರಿಗಾರ್ತಿ ಕುಸುಮಾಗೆ ಬಿದ್ದ ಕನಸಿನಲ್ಲಿ ಅವಳ ಮಾನಸಿಕ ಹೋರಾಟವನ್ನು ಚಿತ್ರಿಸಿ ತೋರಿಸಿದ್ದಾಳೆ. ಆ ಕನಸಿನಲ್ಲಿ ಕುಸುಮಾ ತಂದೆಯ ಕೈಹಿಡಿದು ಹಸಿರು ಮರಗಳಿಂದ ತುಂಬಿದ ಕಾಡಿನಲ್ಲಿ ಹೋಗುವದು, ಹುಲಿ-ಸಿಂಹಗಳ ಘರ್ಜನೆ ಕೇಳಿಬರುವದು, ಇದ್ದಕ್ಕಿದ್ದಂತೆ ತಂದೆಯ ಕೈ ಅವಳ ಹಿಡಿಯಿಂದ ಜಾರಿ ಕುಸುಮಾ ಬೆದರಿ 'ಅಣ್ಣಾ' ಎಂದು ಕೂಗುವದು. ಅವಳ ಪ್ರೀತಿಯ ಚಿಕ್ಕ ಪಾಲಿ ಕ್ರಮೇಣ ನಾಯಿಗಾತ್ರವಾಗಿ, ಚಿತ್ತಿನ ಗಾತ್ರವಾಗಿ ಅನಂತರ ಆನೆಯ ಗಾತ್ರವಾಗಿ ಹುಲಿಯಂತೆ ಆರ್ಭಟಿಸಿ ಕುಸುಮಾಳ ಮೇಲೆ ಛಂಗನೆ ಹಾರುವದು—ಇವೆಲ್ಲಾ ಅವಳ ಅಸ್ವಸ್ಥ ಮನಸ್ಸಿನ ಸೂಚನೆಗಳು. ಕೊನೆಗೆ ಅವಳು ಹುಚ್ಚಿಯಾಗಿ ಹುಚ್ಚಾಸ್ಪತ್ರೆಯಲ್ಲಿ ಸೇರುವುದು, ಅಲ್ಲಿ ಚಿಕ್ಕಮ್ಮ ಬಂದಕೂಡಲೇ ಅಂಜಿ ಹೋಗುವದು ಇವೆಲ್ಲಾ ಅವಳ ಮನಸ್ಸಿಗಾದ ಅಗಾಧ ಪೆಟ್ಟುಗಳನ್ನು ಸೂಚಿಸುತ್ತವೆ. ಅಂತೂ ಕೊನೆಗೆ ಕುಸುಮಾ ಆಸ್ಪತ್ರೆಯಲ್ಲಿ ಏಳು ತಿಂಗಳು ಇದ್ದ ನಂತರ ಗುಣಮುಖವಾಗುತ್ತಾಳೆ. ಪದ್ಮಾನ ಮನಸ್ಸು ಕುಸುಮಾನ ಮೇಲೆ ಕನಿಕರಗೊಂಡರೂ ತಾಯಿಯಂತಾಗುವದಿಲ್ಲ. ತನ್ನ ಮೇಲಿನ ಅಪವಾದ ಹೋಗಲೋಸುಗ ಆಕೆ ಆಸ್ಪತ್ರೆಗೆ ಹೋಗುತ್ತಿರುತ್ತಾಳೆ. ಪದ್ಮಾನ ತಮ್ಮ ರಾಜಶೇಖರನಿಗೂ

ಮತ್ತು ಕುಸುಮಾಗೂ ಆತ್ಮೀಯತೆ ಬೆಳೆಯುತ್ತದೆ. ಕುಸುಮಾಳ ಮಾನಸಿಕ ತೊಳಲಾಟ. ಜಗನ್ನಾಥರಾಯರ ಅನಾಥ ಪ್ರಜ್ಞೆ. ಪದ್ಮಾಳ ಸಿಡುಕುತನ ಕಾದಂಬರಿಯ ಉದ್ದಕ್ಕೂ ಹೆಣೆದುಕೊಂಡು ಬಂದಿವೆ.

'ಮುಚ್ಚಿದಬಾಗಿಲು' ಕಾದಂಬರಿಯಲ್ಲೂ ಕೂಡ ಇದೇ ವಿಚಾರಗಳು ವ್ಯಕ್ತವಾಗಿವೆ. ಡಾ. ಜಯರಾಮು ಮನಶ್ಶಾಸ್ತ್ರಜ್ಞ ಮತ್ತು ಅನುಭವಿ ಡಾಕ್ಟರ್ ಕೂಡಾ. ಈತನ ಆಸ್ಪತ್ರೆಗೆ ಬಂದ ಮಾನಸಿಕ ರೋಗಿಗಳ ಸಂಖ್ಯೆ ಅಪಾರ. ಆಸ್ಪತ್ರೆಯ ಮುಚ್ಚಿದ ಬಾಗಿಲನ್ನು ಕಂಡಾಗ ಏನೂ ಅನಿಸುವದಿಲ್ಲ. ಆದರೆ ಬಾಗಿಲು ತೆರೆದಾಗ ಅಲ್ಲಿಯ ರೋಗಿಗಳ ಚಿತ್ರ ನೋಡುವಂತಹದು. ಅವರೆಲ್ಲಾ ನಿಜ ಜಗತ್ತಿನಿಂದ ದೂರ ಹೋಗಿ ತಮ್ಮದೇ ಆದ ಜಗತ್ತನ್ನು ನಿರ್ಮಿಸಿಕೊಂಡಿರುತ್ತಾರೆ. ಮನಸ್ಸಿನ ಪದರುಗಳ ಏಕತ್ವವಿದ್ದಾಗ ನಾವೂ ಎಲ್ಲರಂತಿರುತ್ತೇವೆ. ಆಗ ಅಲ್ಲಿ ಬಾಗಿಲು ಎಲ್ಲಾ ಸರಿಯಾಗಿಯೇ ಕಾಣುತ್ತಿರುತ್ತದೆ. ಮಾನಸಿಕ ತೊಳಲಾಟದಿಂದ ಪದರುಗಳ ವಿಚ್ಛೇದನೆಯಾದಾಗ ನಾವು ಹುಚ್ಚರಾಗುತ್ತೇವೆ. ಅಲ್ಲಿ ಬಾಗಿಲು ತೆರೆದಿರುತ್ತದೆ.

ಶೀತ ಹೆಚ್ಚಾದರೆ ನೆಗಡಿ ಬರುತ್ತದೆ, ಕಣ್ಣಿಗೆ ಹೆಚ್ಚು ಆಯಾಸವಾದಾಗ ಕಣ್ಣು ಕೆಂಪಗಾಗುತ್ತದೆ. ಅದೇ ರೀತಿ ಮನಸ್ಸಿಗೆ ಯಾವುದಾದರೊಂದು ರೀತಿಯ ಹಿಂಸೆಯಾದರೆ, ರಾಗ-ಭಾವೋದ್ವೇಗಗಳ ಒತ್ತಡ ಹೆಚ್ಚಾದರೆ, ಯಾವುದಾದರೂ ಒಂದು ಭಾವನೆಯನ್ನು ಪ್ರಕಟಿಸಲಾರದೆ ತುಳಿದು ಮೆಟ್ಟಿದರೆ ಜೀವನದ ಕಟಿ

ಯನ್ನುಂಡ ಮನಸ್ಸು ಬೇಸರಗೊಂಡರೆ ಆಗ ಅದು ಒಂದಲ್ಲ ಒಂದು ರೂಪದಲ್ಲಿ ಆಸ್ಫೋಟಗೊಳ್ಳುತ್ತದೆ. ಅದಕ್ಕೆ ನಮ್ಮ ಜನ ದೆವ್ವವೆಂದು, ಭೂತವೆಂದು ಇನ್ನೇನೋ ಹೆಸರಿಟ್ಟು ಕರೆದು ಬದುಕನ್ನೇ ಹಾಳುಮಾಡಿಕೊಳ್ಳುತ್ತಾರೆ.ಸರಿಯಾದ ಮನಶ್ಶಾಸ್ತ್ರಜ್ಞ ಡಾಕ್ಟರರ ಹತ್ತಿರ ಹೋದರೆ ಅದೆಲ್ಲಾ ಪರಿಹಾರವಾಗುತ್ತದೆ ಎಂಬು ದನ್ನು ಈ ಕಾದಂಬರಿ ಪ್ರತಿಪಾದಿಸುತ್ತದೆ.

ಇಲ್ಲಿ ಬರುವ ಸೋಮಶೇಖರ ಬಿ. ಎ. ಪದವೀಧರನಾಗಿ ಶಾಲಾ ಉಪಾಧ್ಯಾಯನಾಗಿದ್ದರೂ ಕೂಡ ತನಗೆ ಗಡ್ಡಮೀಸೆ ಬರದೇ ಇದ್ದುದಕ್ಕಾಗಿ ತನಗಾಗಿ ನಿಯಮಿಸಿದ ಗಿರಿಜೆಯನ್ನು ಮದುವೆಯಾಗುವದೇ ಬೇಡವೆನ್ನುತ್ತಾನೆ. ತಾನು ನಿಜವಾದ ಗಂಡಸಲ್ಲವೆಂದು ತಿಳಿಯುತ್ತಾನೆ. ಇದಕ್ಕೆ ಕಾರಣ ಅವನ ಮಾನಸಿಕ ಚಿಂತನೆ.ಇನ್ನೊಬ್ಬ ಸುಂದರರಾಜ ಎನ್ನುವವನು ಬಿ. ಇ. ಕೊನೆಯ ವರ್ಷದಲ್ಲಿ ಓದುವ ವಿದ್ಯಾರ್ಥಿ ಜಾಣ. ಬುದ್ಧಿವಂತ ಪ್ರಯತ್ನವಾದಿ. ಆದರೆ ಅವನು ತನ್ನ ಕೊನೆಯ ವರ್ಷದ ಪರೀಕ್ಷೆ ಯಲ್ಲಿ ಪಾಸೇ ಆಗುತ್ತಿರುವದಿಲ್ಲ. ತಾನು ಬಿ. ಇ. ಮುಗಿಸಿದರೆ ನಂತರ ಅವರ ಹಿರಿಯರು ಮದುವೆ ಮಾಡುತ್ತಾರೆ. ಆಗ ತಾನು ಆ ಶೀಲಗೆಟ್ಟ ಇಂದಿರೆಯೊಡನೆ ಹೇಗೆ ಬಾಳು ಸಾಗಿಸಬೇಕು ಎಂದು ಅವನ ಮನಸ್ಸು ಚಿಂತಿಸುತ್ತಿರುತ್ತದೆ. ಈ ತೊಳಲಾಟವೇ ಅವನು ಫೇಲಾಗುವದಕ್ಕೆ ಪ್ರಮುಖ ಕಾರಣ.

ಅಕ್ಬರ್ ಎಂಬ ಹುಡುಗನು ಬಲಾತ್ಕಾರದಿಂದ ತಾರಾ ಎಂಬ ಹುಡುಗಿಗೆ ಮುದ್ದಿಸಿದ್ದಕ್ಕಾಗಿ ಅವಳ ಮನಸ್ಸಿಗೆ ಆಘಾತ

ವಾಗಿ ಹುಚ್ಚಿಯಂತಾಗಿರುತ್ತಾಳೆ. ಕನಕ ಎಂಬ ಹುಡುಗಿ ತೀರಿ ಹೋದ ತನ್ನ ಅಜ್ಜಿಯ ನೆನಪನ್ನು ಮರುಕಳಿಸುತ್ತಾ ಇಲ್ಲದ್ದನ್ನು ಕಲ್ಪಿಸುತ್ತಾ ಅಜ್ಜಿ ಭೂತವಾಗಿದ್ದಾಳೆಂದು ಹೆದರುತ್ತಿರುತ್ತಾಳೆ. ಶಾರದಾ ಎಂಬಾಕೆ ಗಂಡನ ಹೊಡೆತ ಬೈಗಳುಗಳಿಂದ ನೊಂದು ಮನಸ್ಸು ಕಹಿಯಾಗಿ ಹುಚ್ಚಿಯಂತಾಗಿರುತ್ತಾಳೆ. ರೀಟಾ ಎಂಬಾಕೆ ಮಿತಸಂತಾನದ ನಿಯಮ ಪಾಲಿಸುವದು ಅಪರಾಧವೆಂದು ತಿಳಿದು ಆ ಭಾವನೆಯನ್ನು ಪ್ರಯತ್ನ ಪೂರ್ವಕವಾಗಿ ಮೆಟ್ಟಿದ್ದರಿಂದ ಮಾನಸಿಕ ತೊಳಲಾಟದಿಂದ ತೊಂದರೆಗೀಡಾಗಿರುತ್ತಾಳೆ.

ಈ ಎಲ್ಲಾ ರೋಗಿಗಳನ್ನೂ ಡಾಕ್ಟರ ಜಯರಾಮು ಅತ್ಯಂತ ಸಹಾನುಭೂತಿಯಿಂದ ಪರೀಕ್ಷಿಸಿ ಎಲ್ಲರನ್ನೂ ಪುನಃ ಮನುಷ್ಯರನ್ನಾಗಿಸುತ್ತಾನೆ. ಹೀಗೆ ಮಾನಸಿಕ ತೊಳಲಾಟದಿಂದ ಬಳಲುವವರ ನೈಜ ಚಿತ್ರವನ್ನು ಕಾದಂಬರಿಕಾರ್ತಿ ಈ ಕಾದಂಬರಿ ಯಲ್ಲಿ ಬಹು ಚನ್ನಾಗಿ ಚಿತ್ರಿಸಿದ್ದಾರೆ.

'ದೂರದ ಬೆಟ್ಟ' ಕಾದಂಬರಿಯೂ ಕೂಡ ಇದೇ ಗುಂಪಿಗೆ ಸೇರಿದುದಾಗಿದೆ. ಶ್ರೀ ಕಂಠಯ್ಯನವರ ಮದುವೆಗೆ ಬಂದ ಶೇಖರ ಹಾಗೂ ಅವನ ತಂದೆ ಶ್ರೀನಿವಾಸರು ಮಂಜುನಾಥರ ಮನೆಯಲ್ಲಿ ತಂಗಿರುತ್ತಾರೆ. ಸುನಂದಾ ಮತ್ತು ಶೇಖರ ಇವರಲ್ಲಿ ಪ್ರೇಮ ಬೀಜ ಮೊಳೆತು ಅದು ಮುಂದೆ ಮದುವೆಗೆ ನಾಂದಿಯಾಗುತ್ತದೆ. ಮದುವೆಯಾದ ಹೊಸತರಲ್ಲಿ ನವದಂಪತಿಗಳ ಜೀವನ ಸುಖ ಮಯವಾಗಿರುತ್ತದೆ. ಶೇಖರ ಎಂಜಿನಿಯರ್ ಕೊನೆಯ ವರ್ಷ ವಲ್ಲಿ ಓದುತ್ತಿದ್ದುದರಿಂದ ಸುನಂದಾನನ್ನು ತವರುಮನೆಯಲ್ಲಿ ಬಿಡುತ್ತಾನೆ. ಶೇಖರ ಸ್ನೇಹಿತರ ಜತೆ ಪ್ರವಾಸಕ್ಕೆಂದು ಹೋಗಿ

ಬಂದ ನಂತರ ಜ್ವರದಿಂದ ಬಳಲಿ ತೀರಿಕೊಳ್ಳುತ್ತಾನೆ. ವಿಧವೆಯಾದ ಸುನಂದಾ ಮನೆಯಲ್ಲಿ ಹೊತ್ತು ಹೋಗದೆ ಇದ್ದುದಕ್ಕೆ ಕಾಲೇಜ ಸೇರುತ್ತಾಳೆ. ಸುನಂದಾ ವಿಧವೆಯೆಂದು ಸಮಾಜವೆಲ್ಲಾ ಬೆರಳು ಮಾಡಿ ತೋರಿಸಿದರೂ ಮನೆಯವರ ದೃಷ್ಟಿಯಲ್ಲಿ ಮಾತ್ರ ಆಕೆ ಮೊದಲಿನ ಸುನಂದೆಯೇ ಆಗಿರುತ್ತಾಳೆ. ಸುನಂದಾ ತಾನು ವಿಧವೆ, ಕೀಳು, ತುಚ್ಛವೆಂದು ಭಾವಿಸಿ ಮಾನಸಿಕ ತೊಳಲಾಟದಲ್ಲಿ ಸಿಲುಕುತ್ತಾಳೆ. ತನ್ನ ಅಣ್ಣ ಸೀತಾರಾಮುವಿನ ಸ್ನೇಹಿತನಾದ ಶ್ರೀಧರನ ಪರಿಚಯ ಸುನಂದಾಳಿಗಾಗುತ್ತದೆ. ಪರಿಚಯ ಬರುಬರುತ್ತಾ ಸ್ನೇಹದಲ್ಲಿ ಬದಲಾವಣೆ ಹೊಂದಿ ಕೊನೆಗೆ ಪ್ರೇಮಕ್ಕೆ ಬರುತ್ತದೆ. ಸುನಂದಾ ತಾನು ವಿಧವೆಯೆಂದು ನೆನಪಾದಾಗ ಶ್ರೀಧರನ ಜತೆಯಲ್ಲಿ ಪ್ರೇಮ ಬೆಳೆಸಲು ಹಿಂಜರಿಯುತ್ತಾಳೆ. ತಾನೇಕೆ ಮರು ಮದುವೆಯಾಗಬಾರದು ಎನ್ನುವ ಧೈರ್ಯವೂ ಒಮ್ಮೊಮ್ಮೆ ಬರುತ್ತದೆ. ಹೀಗೆ ಇಮ್ಮನಸ್ಸಿನ ತೊಳಲಾಟದಲ್ಲಿ ಸಿಕ್ಕ ಸುನಂದಾ ತನ್ನ ತೀರಿಹೋದ ಪತಿಯ ಸಾಮಾನುಗಳನ್ನೆಲ್ಲಾ ರಾತ್ರಿ ಪಾಳು ಭಾವಿಯಲ್ಲಿ ಒಗೆಯುತ್ತಾಳೆ. ಮುಂಜಾನೆದ್ದು ಹುಡುಕಲು ಪ್ರಾರಂಭಿಸುತ್ತಾಳೆ. ದೂರದ ಬೆಟ್ಟದ ಮೇಲೆ ಹೋಗಿ ತನ್ನ ದೇವರಿಗೆ ಪೂಜಿಸಿದ ಹೂಗಳನ್ನೇ ತೆಗೆದುಕೊಂಡು ಮತ್ತೆ ಬೇರೆ ದೇವರಿಗೆ ಪೂಜಿಸಲು ಹೋದಾಗ ಅಲ್ಲಿ ಕೆಂಡದಂತೆ ಕಣ್ಣು ಬಿಟ್ಟು ಕೊಂಡು ನಿಂತಿರುವ ಮುದುಕಿ ಬಿಳ್ಳೀ ಶೃಂಗಾರ ಮಾಡಿಕೊಂಡು ಹೊರಗೆ ಹೋಗುವಾಗ ಸಿಟ್ಟಿಗೇಳುವ ಅತ್ತಿಗೆ ತಾವರೆಯ ಹೂಗಳನ್ನು ಒಯ್ದು ಪೂಜಿಸುವುದು-ಈ ಪ್ರಕಾರದ ಚಿತ್ರಗಳನ್ನು ಅವಳು ಕನಸಿನಲ್ಲಿ ಕಾಣುತ್ತಾಳೆ.

ಕೊನೆಗೆ ಸುನಂದಾ ಡಾಕ್ಟರ ಪತ್ನಿ ತೋರಿಸಿಕೊಂಡು ತನ್ನ ಮನಸ್ಸಿನ ತೊಳಲಾಟವನ್ನು ವಿವರಿಸುತ್ತಾಳೆ. ಅದಕ್ಕೆ ಅವರು ತಕ್ಕ ಪರಿಹಾರ ಸೂಚಿಸಿ ಹಿಂದಿನದನ್ನೆಲ್ಲಾ ಮರೆತು ಹೊಸ ಜೀವನದಲ್ಲಿ ಕಾಲಿಡಬೇಕು, ವಿದ್ಯಾವಂತರಾದವರು ಧೈರ್ಯದಿಂದ ಮುಂದುವರಿಯಬೇಕು. ಗಂಡಸಿಗೆ ಅಷ್ಟೇ ಅಲ್ಲ ಹೆಣ್ಣಿಗೂ ಮರು ಮದುವೆಯಾಗುವ ಹಕ್ಕು ಇದೆಯೆಂದು ತಿಳಿಸಿ, "ನೀವು ಸತ್ತು ಹೋಗಿದ್ದರೆ ಅವನು ನಿಮ್ಮನ್ನು ಮರೆತು ಇನ್ನೊಂದು ಮದುವೆ ಮಾಡಿಕೊಳ್ಳುತ್ತಿದ್ದ" ಎಂದು ಹೇಳುತ್ತಾರೆ. ಶ್ರೀಧರನಂತಹ ದೊಡ್ಡ ಗುಣದ ಪುರುಷನಿಂದ ಸುನಂದಾನ ಬಾಳು ಮತ್ತೆ ಅರಳುತ್ತದೆ.

ಸಮಾಜದಲ್ಲಿ ವಿಧವೆಯಾದವಳು ಮರುಮದುವೆ ಮಾಡಿಕೊಳ್ಳುವದು ಮಹಾಪಾಪವೆನ್ನುವ ಮೂಢ ವಿಚಾರವನ್ನು ಲೇಖಕಿ ಸುನಂದಾ ಮತ್ತು ಶ್ರೀಧರನ ಪಾತ್ರದ ಮುಖಾಂತರ ಕಿತ್ತೆಸೆಯಲು ಪ್ರಯತ್ನಿಸಿದ್ದಾರೆ. ಸುನಂದಾಳ ಪಾತ್ರದಲ್ಲಿ ನಾವು ಜಾಗೃತ ಪ್ರಜ್ಞೆ ಹಾಗೂ ಸುಪ್ತಪ್ರಜ್ಞೆಗಳ ಹೋರಾಟ ಕಾಣುತ್ತೇವೆ. ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಸಮಸ್ಯೆಯೊಂದನ್ನು ಮೂಲವಾಗಿಟ್ಟುಕೊಂಡು ರಚಿತವಾದ ಈ ಕಾದಂಬರಿ ತುಂಬ ಚೆನ್ನಾಗಿ ನಿರೂಪಿತವಾಗಿದೆ.

ಹೀಗೆ ಈ ಎಲ್ಲಾ ಕಾದಂಬರಿಗಳಲ್ಲಿ ಮಾನಸಿಕ ತೊಳಲಾಟವನ್ನು ಕಾಣಬಹುದಾಗಿದೆ. ಮಾನಸಿಕ ರೋಗಿ ಇತರ ರೋಗಿಗಳಂತೆ ಗುಣವಾಗಬಲ್ಲನೆಂಬುದಕ್ಕೆ ಇಲ್ಲಿ ಸಾಕಷ್ಟು ರುಜುವಾತುಗಳಿವೆ.

ಭೂತ, ದೆವ್ವ, ಹುಚ್ಚು ಎಂದು ಕೈಕಟ್ಟಿ ಕೂಡುವದು ಬಹಳ ಅಪಾಯಕಾರಿ ಎಂಬುದೂ ಈ ಎಲ್ಲಾ ಕಾದಂಬರಿಗಳಿಂದ ಮನದಟ್ಟಾಗುತ್ತದೆ.

(iii) ಮನರಂಜನೆ

'ಬಾನು ಬೆಳಗಿತು', 'ಹೃದಯಗೀತ', 'ವಸಂತಗಾನ', ಮತ್ತು 'ಕಾಶೀಯಶಾತ್ರೆ' ಈ ಕಾರಂಬರಿಗಳನ್ನು ಮನರಂಜನೆಯ ಕಾದಂಬರಿಗಳೆಂದು ಬೇರ್ಪಡಿಸಬಹುದು. ತ್ರೀವೇಣಿಯವರು ತಮ್ಮ ಉಳಿದ ಕಾದಂಬರಿಗಳಲ್ಲಿಯ ಹಾಗೆ ಇಲ್ಲಿ ಯಾವುದೇ ಜ್ವಲಂತ ಸಮಸ್ಯೆಯನ್ನಿಟ್ಟುಕೊಂಡಿಲ್ಲ, ಮಾನಸಿಕ ತೊಳಲಾಟವಿಲ್ಲ. ವ್ಯಂಗ್ಯದ ಮೊನಚಿಲ್ಲ. ಕೇವಲ ಮನರಂಜನೆ ನೀಡುವದರ ಸಲುವಾಗಿ ಮಾತ್ರ ಈ ಕಾದಂಬರಿಗಳ ರಚನೆಯಾದಂತಿದೆ. ಈ ನಾಲ್ಕು ಕಾದಂಬರಿಗಳು ಕೇವಲ ಸಿನಿಮೀಯವಾಗಿವೆಯೆಂತಲೂ ಹೇಳಬಹುದು.

'ಬಾನು ಬೆಳಗಿತು' ಕಾದಂಬರಿಯಲ್ಲಿ ಬರುವ ಕಲ್ಯಾಣಿ ಹಾಗೂ ರಾಮನಾಥ ಮೆಚ್ಚಿ ಮದುವೆಯಾದ ದಂಪತಿಗಳು. ರಾಮನಾಥನ ತಂದೆ–ತಾಯಿಗಳಾದ ಶೇಷಯ್ಯ ಸೀತಮ್ಮರ ಬದುಕಿಗೂ ಇವರ ಬದುಕಿಗೂ ಅಜಗಜಾಂತರವಿದೆ.ತನಗೆ ಏನನ್ನೂ ತಂದು ಕೊಡದ ಜಿಪುಣ ಪತಿ ಶೇಷಯ್ಯನಂಥವನ ಜತೆ ಅತಿ ಆನಂದದಿಂದ ಜೀವನ ಸಾಗಿಸುವ ಸೀತಮ್ಮನಿಗೂ, ಕೇಳಿದುದೆಲ್ಲ ವನ್ನೂ ತಂದು ಕೊಟ್ಟರೂ ಮತ್ತೆ ಬೇಸರದ ನಿಟ್ಟುಸಿರು ಹಾಕುವ ಕಲ್ಯಾಣಿಗೂ ಬಹಳ ಅಂತರವಿದೆ. ಮದುವೆಯಾದ ಎರಡು ವರ್ಷ

ರಾಮನಾಥ-ಕಲ್ಯಾಣಿ ಅತ್ಯಂತ ಸಂತೋಷದಿಂದಿರುತ್ತಾರೆ. ಕಲ್ಯಾಣಿಯೇ ಸರ್ವಸ್ವವೆಂದು ಆತ, ರಾಮನಾಥನೇ ಎಲ್ಲಾ ಎಂದು ಆಕೆ ತಿಳಿದುಕೊಂಡು ತೃಪ್ತಿಯ ಬಾಳು ಸಾಗಿಸುತ್ತಿರುತ್ತಾರೆ. ಹೊಸ ಹುರುಪು, ಯೌವನದ ಕಾವು ಎರಡೇ ವರ್ಷಗಳಲ್ಲಿ ತಣ್ಣಗಾಗುತ್ತದೆ. ಆಗ ಇಬ್ಬರಲ್ಲಿಯೂ ಮೊದಲಿನ ಪ್ರೀತಿಯಲ್ಲಿಯ ಗಾಢತೆ ಕಡಿಮೆಯಾಗುತ್ತದೆ. ಬರುಬರುತ್ತ ಇಬ್ಬರಲ್ಲಿಯೂ ಮನಸ್ತಾಪವಾಗಿ ಬಿ. ಎಸ್‌ಸಿ. ಪದವೀಧರೆಯಾಗಿದ್ದ ಕಲ್ಯಾಣಿ ಶಿಕ್ಷಕಿಯ ವೃತ್ತಿಯನ್ನು ಕೈಕೊಳ್ಳುತ್ತಾಳೆ. ಆಕೆ ಕೆಲಸಮಾಡುತ್ತಿರುವದು ರಾಮನಾಥನಿಗೆ ಬೇಡವೆನ್ನಿಸುತ್ತದೆ. ಆದರೆ ಹೆಂಡತಿ ಕೆಲಸ ಬಿಡಲು ಸಿದ್ಧಳಿರುವದಿಲ್ಲ. ಹೀಗೆ ಇಬ್ಬರಲ್ಲಿಯೂ ಜಗಳವಾಗಿ ಆಕೆ ತವರುಮನೆಗೆ ಹೋಗುತ್ತಾಳೆ. ಮದುವೆಯಾದ ಹೊಸತರಲ್ಲಿ ದಿನಕ್ಕೊಂದು ಪತ್ರ ಬರೆಯುತ್ತಿದ್ದ ಈ ದಂಪತಿಗಳು ಈಗ ತಿಂಗಳುಗಳೆಷ್ಟೋ ಗತಿಸಿದರೂ ಒಬ್ಬರಿಗೊಬ್ಬರು ಪತ್ರ ಹಾಕದಷ್ಟು ದೂರವಾಗಿರುತ್ತಾರೆ. ತವರುಮನೆಯಲ್ಲಿ ತಾಯಿಯೊಬ್ಬಳನ್ನುಳಿದು ಎಲ್ಲರೂ ಕಲ್ಯಾಣಿಯನ್ನು ತಾತ್ಸಾರದಿಂದ ಕಾಣುತ್ತಿರುತ್ತಾರೆ. ಕೊನೆಗೆ ಆಕೆಗೆ ಕಾಹಿಲೆಯೆಂದು ರಾಮನಾಥನಿಗೆ ತನ್ನ ಭಾವನಿಂದ ಪತ್ರಬರುತ್ತದೆ. ಆಗ ರಾಮನಾಥ ಹೆಂಡತಿಯ ಊರಿಗೆ ಹೋಗುತ್ತಾನೆ. ಸ್ವಲ್ಪ ಚೇತರಿಸಿಕೊಂಡ ಕಲ್ಯಾಣಿ ತನ್ನ ತಪ್ಪಿನ ಅರಿವಾಗಿ ಅಂದೇ ಗಂಡನಾದ ರಾಮನಾಥನ ಮನೆಗೆ ಬರುತ್ತಾಳೆ. ಇದೇ ಕಥಾವಸ್ತು. ಹೊಸ ದಂಪತಿಗಳ ರಸಿಕತನದ ಜೀವನ, ಪ್ರಣಯ ಸನ್ನಿವೇಶ, ಅಗಲಿದ ದಂಪತಿಗಳು ಮರಳಿ ಕೂಡುವದು ಇಷ್ಟನ್ನು ಬಿಟ್ಟರೆ ಈ ಕಾದಂ

ಬರಿಯಲ್ಲಿ ಮತ್ತೇನೂ ಇಲ್ಲ. ಕೇವಲ ಮನರಂಜನೆಗಾಗಿ ಇವುಗಳನ್ನು ಓದಬಹುದು.

ಇದೇ ತರಹದ ಕಾದಂಬರಿ 'ಹೃದಯ ಗೀತೆ'. ಮೂರ್ತಿ ಶ್ರೀಮಂತ ಮನೆತನದವನು. ಮಗಳಾದ ಗೀತಾ ಐದು ವರ್ಷದವಳಿದ್ದಾಗ ಹೆಂಡತಿ ಮರಣವನ್ನಪ್ಪುತ್ತಾಳೆ. ಗೀತಾ ಪದ್ಮಾ ಒಂದೇ ತರಗತಿಯಲ್ಲಿ ಓದುವ ಸ್ನೇಹಿತೆಯರು. ಗೀತಾ ಶ್ರೀಮಂತಳಿದ್ದುದರಿಂದ, ಮನೆಯಲ್ಲಿ ಮುದ್ದಿನಿಂದ ಬೆಳೆಸಿರುವದರಿಂದ ಕಾರಿನಲ್ಲಿ ಅಡ್ಡಾಡುತ್ತಾಳೆ. ಉಳಿದ ಹುಡುಗಿಯರಿಗೆ ಇವಳನ್ನು ಕಂಡರೆ ಹೊಟ್ಟೆಕಿಚ್ಚು. ಒಮ್ಮೆ ಗೀತಾ ಒಂದು ವಾರ ಶಾಲೆಗೆ ಹೋಗದ್ದರಿಂದ ಪದ್ಮಾ ಗೀತಾಳನ್ನು ಕಾಣಲೆಂದು ಅವಳ ಮನೆಗೆ ಬರುತ್ತಾಳೆ. ವರಂಡಾದಲ್ಲಿದ್ದ ಮೂರ್ತಿ ಪದ್ಮಾಳನ್ನು ಕಂಡು ಯಾರಾದರೂ ಅನಾಥರು ಸಹಾಯ ಕೇಳಲು ಬಂದಿರಬಹುದೆಂದು ತಿಳಿದು 'ಈಗ ಸಹಾಯಮಾಡಲಿಕ್ಕಾಗೋದಿಲ್ಲ ಮುಂದೆ ಹೋಗಿ' ಎಂದು ಅಸಹನೆಯಿಂದ ನುಡಿಯುತ್ತಾನೆ. 'ನಾನು ಗೀತಾಳ ಸಹಪಾಠಿ ಅವಳಿಗೆ ಹುಷಾರಿಲ್ಲದ್ದರಿಂದ ನೋಡಿಕೊಂಡು ಹೋಗೋಣವೆಂದು ಬಂದೆ'ನೆಂದು ಅಷ್ಟೇ ಬಿಗುಮಾನದಿಂದ ಉತ್ತರಕೊಡುತ್ತಾಳೆ. ಆಗ ಮೂರ್ತಿ ಪದ್ಮಾಳನ್ನು ಮಹಡಿಯ ಮೇಲೆಕರೆದುಕೊಂಡು ಹೋಗಿ ಗೀತಾಳನ್ನು ತೋರಿಸುತ್ತಾನೆ. ಗೀತಾತನ್ನ ಗೆಳತಿಯನ್ನು ತಂದೆಗೆ ಪರಿಚಯಿಸುತ್ತಾಳೆ. ಇಷ್ಟುವಯಸ್ಸಾದರೂ ತರುಣರಂತೆ ಕಾಣುವ ಮೂರ್ತಿಯು ಗೀತಾಳ ಅಣ್ಣನೇ ಇರಬೇಕೆಂದು ಭಾವಿಸಿದ ಪದ್ಮಾಳಿಗೆ ಆತ ಗೀತಾಳ ತಂದೆಯೆಂದು ತಿಳಿದ ಕ್ಷಣ ಆಶ್ಚರ್ಯವಾಗುತ್ತದೆ.ಹೀಗೆ ಪದ್ಮಾ ಆಗಾಗ ಗೀತಾಳ

ಮನೆಗೆ ಬರುತ್ತಿರುತ್ತಾಳೆ. ಮೂರ್ತಿಯ ಬಗ್ಗೆ ತನ್ನಲ್ಲಿದ್ದ ತಪ್ಪು ಕಲ್ಪನೆ, ಸಂಕೋಚ ಎಲ್ಲಾ ಮಾಯವಾಗಿ ಪ್ರೀತಿಯ ಭಾವನೆ ಪದ್ಮಿನಿಯ ಮನದಲ್ಲಿ ನೆಲೆಸುತ್ತದೆ. ಒಮ್ಮೆ ಗೀತಾ ತನ್ನ ಸಂಬಂಧಿಕರ ಊರಿಗೆ ಹೋದಾಗ ಪದ್ಮಾ ಮೂರ್ತಿಯ ಮನೆಗೆ ಬರುತ್ತಾಳೆ. ನಾಲವತ್ತೆರಡು ವರ್ಷ ವಯಸ್ಸಿನ ಮೂರ್ತಿಗೆ ಪದ್ಮಾಳನ್ನು ಕಂಡು ಹರೆಯ ಚಿಗುರುತ್ತದೆ. ಪದ್ಮಾ ಕೂಡ ಮೂರ್ತಿಯನ್ನೆ ಒಲಿಯುತ್ತಾಳೆ. "ನನ್ನಂತಹ ಮುದುಕನನ್ನು ಮದುವೆಯಾಗುವದರಲ್ಲಿ ಏನರ್ಥವಿದೆ. ಒಳ್ಳೇ ತರುಣನನ್ನು ನೋಡಿ ಮದುವೆಯಾಗು" ಎಂದು ಮೂರ್ತಿ ಪದ್ಮಾಗೆ ಹೇಳಿದರೂ ಕೇಳದೆ. "ಮದುವೆಯಾದರೆ ನಾನು ನಿಮ್ಮನ್ನೇ ಮದುವೆಯಾಗುತ್ತೇನೆ" ಎನ್ನುವ ನಿರ್ಧಾರಕ್ಕೆ ಪದ್ಮಾ ಬರುತ್ತಾಳೆ. ಪದ್ಮಾನ ತಂದೆ-ತಾಯಿ ಈ ಮದುವೆಗೆ ವಿರೋಧಿಸಿದರೂ ಅವಳು ಅಣ್ಣನ ಬೆಂಬಲ ಪಡೆದು ಮೂರ್ತಿಯನ್ನೇ ಮದುವೆಯಾಗುತ್ತಾಳೆ. ಗೀತಾ ಸಂತೋಷದಿಂದ ಪದ್ಮಾನನ್ನು ಚಿಕ್ಕಮ್ಮಳೆಂದು ಸ್ವೀಕರಿಸುತ್ತಾಳೆ. ಇದೇ 'ಹೃದಯಗೀತೆ'ಯ ಕಥೆ.

ತ್ರಿವೇಣಿಯವರ 'ವಸಂತಗಾನ' ಕಾದಂಬರಿ ಹೆಚ್ಚಿನದನ್ನು ಸಾಧಿಸದೇ ಹೋಗಿದೆ. ಪಂಕಜಮ್ಮನ ಮಗಳು ಅರುಂಧತಿಯನ್ನು ತಮ್ಮನಾದ ವಾಸುವಿಗೆ ಕೊಟ್ಟು ಮದುವೆಮಾಡಬೇಕೆಂಬ ಪಂಕಜಮ್ಮನ ಆಸೆ ನಿರಾಸೆಯಾಗುತ್ತದೆ. ವಾಸು ಸರಳಾಯೆಂಬ ಹುಡುಗಿಯನ್ನು ಮದುವೆಯಾಗುತ್ತಾನೆ. ಪೈಲೆಟ್ ಆಫೀಸರನಾಗಿದ್ದ ರಾಜಗೋಪಾಲ ಅರುಂಧತಿಯನ್ನು ಮದುವೆಯಾಗು

ತ್ತಾನೆ. ಸರಳಾ ಹಾಗೂ ವಾಸು ಇವರ ದಾಂಪತ್ಯ ಜೀವನವನ್ನು ಕಾದಂಬರಿಕಾರ್ತಿ ಅತ್ಯಂತ ಶೃಂಗಾರಮಯವಾಗಿ ವರ್ಣಿಸಿದ್ದಾರೆ. ಸರಳಾ ಗರ್ಭಿಣಿಯಾದಾಗ ಗಂಡ. ಅತ್ತೆಯರು ಮಾಡುವ ಸೇವೆ ಕಂಡು ಮಾರು ಹೋಗುತ್ತಾಳೆ. ವಾಸು ಹೆಂಡತಿಯನ್ನು ಅತಿ ಪ್ರೀತಿಯಿಂದ ಕಾಣುತ್ತಿರುತ್ತಾನೆ. ಸರಳಾ ಕೂಡ ಅಷ್ಟೆ. ಪತಿಯ ಮನಸ್ಸಿಗೆ ಎಳ್ಳಷ್ಟೂ ನೋವಾಗದಂತೆ ನಡೆದುಕೊಳ್ಳುತ್ತಿರುತ್ತಾಳೆ. ಸರಳಾಗೆ ಹೆರಿಗೆಯ ನೋವುಂಟಾದಾಗ ತನಗೇ ನೋವಾಗುವ ದೇನೋ ಎನ್ನುವಂತೆ ವಾಸು ಚಡಪಡಿಸುತ್ತಾನೆ. ಗಂಡುಮಗು ಜನಿಸಿದ್ದರಿಂದ ಎಲ್ಲರೂ ಸಂತೋಷದಿಂದ ಸಿಹಿ ತಿನ್ನುತ್ತಾರೆ. ಮೊದಲಿನಿಂದ ಕೊನೆಯವರೆಗೂ ಕಾದಂಬರಿಯಲ್ಲಿ ಬರೀ ಸುಖಾಂತ ಸನ್ನಿವೇಶಗಳೇ ತುಂಬಿವೆ. ಓದುಗರಿಗೆ ಬರೀ ಮನರಂಜನೆಯನ್ನು ಒದಗಿಸುವ ಕಾದಂಬರಿಗಳಲ್ಲೊಂದು ಇದು.

'ಕಾಶೀಯಾತ್ರೆ' ಕಾದಂಬರಿಯಲ್ಲಿ ಒಬ್ಬ ಮುದುಕಿ ಕಾಶಿಗೆ ಹೋಗಬೇಕೆಂದು ಹಣ ಕೂಡಿಟ್ಟು, ಕೊನೆಗೆ ತನ್ನ ನೆರೆ ಮನೆಯಾಕೆಗೆ ಹೆರಿಗೆಯಾದಾಗ ಎಲ್ಲಾ ಹಣವನ್ನು ಆಕೆಗೆ ಖರ್ಚು ಮಾಡಿ ತನ್ನ ಕಾಶೀಯಾತ್ರೆಯ ವಿಚಾರ ಬಿಟ್ಟುಬಿಡುತ್ತಾಳೆ. ಅವಳ ಔದಾರ್ಯದ ಚಿತ್ರಣವೇ ಈ ಕಾದಂಬರಿಯ ಮೂಲ ಧನವಾಗಿದೆ.

ಹೀಗೆ ನಾಲ್ಕೂ ಕಾದಂಬರಿಗಳಲ್ಲೂ ಅಂತಹ ಯಾವುದೇ ಪ್ರಧಾನತೆ ಇರದೇ ಇರುವದರಿಂದ ಇವು ಸೀರಿಯಸ್ ಆಗಿ ವಿಚಾರಿಸಲು ಹಚ್ಚದೇ ಇರುವದರಿಂದ ಕೇವಲ ಮನರಂಜನೀಯವಾಗಿ ಉಳಿಯುತ್ತವೆ.

(iv) ವಸ್ತು-ಶೈಲಿ-ಸಂಭಾಷಣೆ

ತ್ರಿವೇಣಿಯವರ ಕೃತಿಗಳಲ್ಲಿ ಗಂಡಿನ ಸ್ವಾರ್ಥಮನೋಭಾವವನ್ನು ಹೆಣ್ಣಿನ ದೃಷ್ಟಿಯಲ್ಲಿ ನೋಡಿರುವದರಿಂದ ಪ್ರತಿಪಾದನೆಯಲ್ಲಿ ಹೊಸತನ ಕಂಡಿದೆ. ಅವರು ಸಮಾಜವನ್ನು ನೋಡುವ ದೃಷ್ಟಿಕೋನವೇ ಭಿನ್ನವಾದುದು. ಅವರು ತಮ್ಮ ಕಾದಂಬರಿಗಳಿಗಾಗಿ ಆಯ್ದುಕೊಂಡ ವಸ್ತು ಕೂಡ ಅಷ್ಟೇ ಮಹತ್ವದವುಗಳು. ಅವರು ಚಿತ್ರಿಸಿದ ಬೆಕ್ಕಿನ ಕಣ್ಣಿನ ಕುಸುಮಾ, ದೂರದಬೆಟ್ಟದ ಸುನಂದಾ, ಶರಪಂಜರದ ಕಾವೇರಿ, ಮುಚ್ಚಿದ ಬಾಗಿಲಿನ ತಾರಾ, ಕನಕ, ಶಾರದಾ .ರೀಟಾ, ಸುಬ್ಬು, ಸೋಮು ಇವರೆಲ್ಲಾ ಮಾನಸಿಕ ತೊಳಲಾಟದಿಂದ ಬಳಲುವವರು. ಈ ಕಾದಂಬರಿಗಳಲ್ಲಿ ಇಂಥ ಅಸ್ವಸ್ಥ ಮನಸ್ಸಿನವರ ಚಿತ್ರಣವೇ ಮುಖ್ಯವಾಗಿದೆ. ಶೀತ, ನೆಗಡಿ ಜ್ವರದಂತೆ ಮಾನಸಿಕ ರೋಗವೂ ಕೂಡ ಹೋಗಬಲ್ಲುದು. ಅದಕ್ಕೆ ತಾಳ್ಮೆ, ಸಹನೆ ಸಹಕಾರ ಅತ್ಯಗತ್ಯವೆಂದು ಪ್ರತಿಪಾದಿಸುವ ಇಲ್ಲಿಯ ವಿಚಾರ ನಿಜಕ್ಕೂ ಬಹಳ ಪ್ರಮುಖವಾದುದು. ಮನಶ್ಯಾಸ್ತ್ರದ ಬಗೆಗಿರುವ ಕಲ್ಪನೆ, ಅದರ ಮಹತ್ವ ಇವೆಲ್ಲವುಗಳನ್ನು ಕಾದಂಬರಿಕಾರ್ತಿ ಅತ್ಯಂತ ಸ್ಪಷ್ಟವಾಗಿ ನಿರೂಪಿಸಿದ್ದಾರೆ.

ಮನಶ್ಯಾಸ್ತ್ರಕ್ಕೆ ಸಂಬಂಧಿಸಿದ ವಸ್ತು ಈ ತರಹದ್ದಾದರೆ ಇನ್ನು ಸಮಾಜವನ್ನು ನೋಡಿದ ಈಕೆ ವಿಭಿನ್ನ ತರಗತಿಯ ಜನರನ್ನು, ಅಲ್ಲಿಯ ಹಲವಾರು ಸಂಸಾರಗಳನ್ನು, ಗಂಡು-ಹೆಣ್ಣಿಗೆ ಕೊಡುವ ಹಿಂಸೆಯನ್ನು ಅತ್ಯಂತ ಮಾರ್ಮಿಕವಾಗಿ ಪ್ರತಿಪಾದಿಸಿದ್ದಾರೆ.

'ಹೂವು ಹಣ್ಣು' ಕಾದಂಬರಿಯು ರಮಾ ಗಂಡ ಸತ್ತನಂತರ ವೇಶ್ಯೆಯಾಗುವದು, ಅವಳ ಬಗ್ಗೆ ಅನುಕಂಪ ಉಂಟಾಗುವಂತೆ ಮಾಡಲು ಹೆಣ್ಣಿನ ಅನೀತಿ ಜೀವನಕ್ಕೆ ಸಮಾಜವೇ ಹೊಣೆ ಎಂಬಂತೆ ಚಿತ್ರಿಸಲಾಗಿದೆ. 'ತಾವರೆ ಕೊಳ'ದ-ರತ್ನಾ ಹಾಗೂ 'ಸೋತುಗೆದ್ದವಳು' ಕಾದಂಬರಿಯ ಭಾರತಿ ಇವರ ಅನೀತಿಯ ಜೀವನಕ್ಕೆ ಅವರವರ ಮಾನಸಿಕ ದೌರ್ಬಲ್ಯವೇ ಕಾರಣವಲ್ಲದೆ ಸಮಾಜವಲ್ಲ ಎಂದು ಸ್ಪಷ್ಟವಾಗುತ್ತದೆ.

ಒತ್ತಾಯದ ಮದುವೆಯಿಂದಾಗುವ ಅನಾಹುತಕ್ಕೆ ಹೆಣ್ಣು ಗಂಡು ಪರಸ್ಪರ ನೋಡಿ ಒಪ್ಪದ ಹೊರತು ಹಿರಿಯರು ತಮ್ಮ ಹಿರಿತನ ಪ್ರದರ್ಶಿಸಲು ಮದುವೆ ಮಾಡಿದರೆ ಅವರ ಬಾಳು ಹಾಳಾಗುತ್ತದೆ ಎಂಬುದಕ್ಕೆ 'ಅಪಸ್ವರ' ಕಾದಂಬರಿಯ ವಸ್ತುವೇ ಉದಾಹರಣೆ. ಪ್ರಯತ್ನ, ಹೋರಾಟಗಳಿಗೆ ಖಂಡಿತವಾಗಿಯೂ ಜಯ ದೊರಕುತ್ತದೆ ಎಂಬುದನ್ನು ಪ್ರತಿನಿಧಿಸುವ 'ಕಂಕಣ' ಮತ್ತು 'ಮುಕ್ತಿ' ಕಾದಂಬರಿಗಳೂ ಕೂಡ ಒಳ್ಳೆಯ ವಸ್ತುವನ್ನು ಪಡೆದಿವೆ. ಮದುವೆಯಾದ ದಂಪತಿಗಳಿಗೆ ಲೈಂಗಿಕ ಪರಿಜ್ಞಾನ ಅವಶ್ಯವೆಂದು ತಿಳಿಸುವ 'ಕೀಲುಗೊಂಬೆ', ಬಡತನದ ಬೇಗೆಯಿಂದ ದತ್ತು ಕೊಟ್ಟ ಹೆಣ್ಣುಮಗಳೊಬ್ಬಳ ಹೃದಯಸ್ಪರ್ಶಿ ಕಥೆಯು ನ್ನೊಳಗೊಂಡ 'ಅವಳ ಮನೆ' ವಿಧವಾ ಸಮಸ್ಯೆಯನ್ನೊಳಗೊಂಡು ತಿಳಿಹಾಸ್ಯದೊಂದಿಗೆ ಮೂಡಿ ಬಂದಿರುವ 'ಹಣ್ಣೆಲೆ ಚಿಗುರಿದಾಗ' ಶ್ರೀಮಂತ ಹೆಣ್ಣೊಬ್ಬಳ ದುರಂತವನ್ನೊಳಗೊಂಡ 'ಬೆಳ್ಳಿಯ ಮೋಡ' ಈ ಎಲ್ಲ ಕಾದಂಬರಿಗಳಲ್ಲಿ ಸಮಾಜದ ಸಮಸ್ಯೆಗಳಿಗೆ ಪರಿಹಾರವನ್ನೊದಗಿಸುವ ವಿಚಾರಗಳಿವೆ.

ಹೀಗೆ ತ್ರಿವೇಣಿಯವರ ಕಾದಂಬರಿಗಳಲ್ಲಿ ನಿರೂಪಿತವಾದ ವಸ್ತು ವೈವಿಧ್ಯವನ್ನು ಯಾರಾದರೂ ಗುರುತಿಸಬಹುದಾಗಿದೆ. ಹೇಳ ಬೇಕಾದುದನ್ನು ಅತ್ಯಂತ ಸರಳವಾಗಿ, ಮನೋಹರವಾಗಿ ಹಾಗೂ ಅರ್ಥವತ್ತಾಗಿ ಹೇಳುವ ತ್ರಿವೇಣಿಯವರ ಶೈಲಿ ತುಂಬ ಆಕರ್ಷಕ ವಾಗಿದೆ.

"Style is the image of character" ಎನ್ನುವ ವಿಚಾರವೂ ಉಂಟು. ತ್ರಿವೇಣಿಯವರ ಶೈಲಿ ಈ ಹೇಳಿಕೆಗೂ ಅನ್ವ ಯಿಸುತ್ತದೆ. ಅವರ ಶೈಲಿ ಬಹಳ ಪೋಷಕ ಮತ್ತು ಅಷ್ಟೇ ರಂಜ ನೀಯ. ಅವರ ಸರಳ ಸುಂದರವಾದ ಶೈಲಿಯಿಂದಲೇ ಕೆಲ ಕಾದಂ ಬರಿಗಳು ಎಷ್ಟೇ ವಿಸ್ತಾರವಾಗಿದ್ದರೂ ಮತ್ತು ಅದರಲ್ಲಿ ಹೊಸದು ಏನೂ ಇಲ್ಲದೇ ಇದ್ದರೂ ಕೂಡ ತಾವೇ ಓದಿಸಿಕೊಂಡು ಹೋಗು ತ್ತವೆ. ಇದಕ್ಕೆ ಕಾರಣ ಅವರ ಆಕರ್ಷಕವಾದ ಸರಳ ಸುಂದರ ಶೈಲಿ.

ತ್ರಿವೇಣಿಯವರು ಅತ್ಯಂತ ಸರಳ ಹಾಗೂ ಮೃದು ಸ್ವಭಾವ ದವರು. ಅವರು ಹೇಗೋ ಹಾಗೇ ಅವರ ಬರಹ. ಮಹಿಳಾ ಲೇಖಕಿಯರ ಕೃತಿಗಳನ್ನು ಗಮನಿಸಿದಾಗ ಎದ್ದುಕಾಣುವ ಹಾಗೂ ಹೃದ್ಯವಾದ ಶೈಲಿ ತ್ರಿವೇಣಿಯವರದೇ ಎಂದು ಸ್ಪಷ್ಟವಾಗಿ ಹೇಳ ಬಹುದು.

ಇನ್ನು ತ್ರಿವೇಣಿಯವರ ಕಾದಂಬರಿಗಳಲ್ಲಿ ಬರುವ ಸಂಭಾ ಷಣೆಯ ಬಗೆಗೆ ಹೇಳಬೇಕೆಂದರೆ. ಅವು ಎಷ್ಟು ಸರಳವೋ ಅಷ್ಟೇ ಆಕರ್ಷಣೀಯ. ಪ್ರಣಯಿಗಳ ಸಂಭಾಷಣೆಗಳನ್ನಂತೂ, ಮತ್ತೆ

ಮತ್ತೆ ಓದಬೇಕೆನಿಸುತ್ತದೆ. ಅಲ್ಲಿಯ ನವುರಾದ ಹಾಸ್ಯ, ಆತ್ಮೀಯತೆಗಳು ಸಂಭಾಷಣೆಯುದ್ದಕ್ಕೂ ಹರಿದು ಬಂದಿವೆ.

'ಶರಪಂಜರ'ದ ಸತೀಶ ಗೆಳೆಯನ ಮದುವೆಗೆ ಹೋದಾಗ ಮೊದಲ ಬಾರಿಗೆ ಕಾವೇರಿಯನ್ನು ನೋಡಿ ಮನಸೋಲುತ್ತಾನೆ. ಇದನ್ನು ಕಂಡ ಅವನ ಗೆಳೆಯನ ಈ ಪ್ರಶ್ನೆಗಳಿಗೆ ಸತೀಶ ಕೊಡುವ ಉತ್ತರವನ್ನು ನೋಡಿರಿ.

"ಯಾಕೋ, ಏನಾದರೂ ಕಳೆದುಕೊಂಡೆಯಾ ? "

"ಹೂಂ"

"ಏನು? "

"ಹೃದಯ"

ಇದೇ ಕಾದಂಬರಿಯಲ್ಲಿ ಬರುವ ಇನ್ನೊಂದು ಸಂಭಾಷಣೆ ಹೀಗಿದೆ.

"ಸುಸ್ತಾಯಿತೇನೆ ಕಾವೇರಿ?"

"ಇಲ್ಲಪ್ಪಾ, ಸುಮ್ಮನೇ ಜಾಗ ನೋಡೋಣಾಂತ ಕುಳಿತೆ"

"ಮದ್ದೂರಿನಲ್ಲಿ ಏನಾದರೂ ತೆಗೆದುಕೊಳ್ಳೋಣ"

"ಆಗಲಿ"

"ನಿದ್ದೆಬಂದರೆ ಮಲಗು"

"ಹೂಂ"

ನಿದ್ದೆ ಬರುತ್ತಿದೆಯಾ? "

"ಇಲ್ಲ"

"ಚಳಿ ಆಗ್ತಿದೆಯಾ"

"ಇಲ್ಲ"

ಎಳೆಯ ಮಗುವನ್ನು ಸಮಾಧಾನ ಪಡಿಸುವಂತೆ ಸತೀಶ ತನ್ನ ಹೆಂಡತಿ ಕಾವೇರಿಯನ್ನು ಕೇಳುವ ರೀತಿ ಬಹಳ ಸರಳ ಮತ್ತು ಅಷ್ಟೇ ನಾಟಕೀಯ. ಇಂತಹ ಮುಗ್ಧ ಭಾವದ ಸಂಭಾಷಣೆಗಳನ್ನು ವಸಂತಗಾನ ಕಾದಂಬರಿಯ ವಾಸು– ಸರಳಾರ ಮಾತುಗಳಲ್ಲಿ ಕಾಣಬಹುದು.

"ಮಾತ್ರೆ ತಗೊಂಡೆಯಾ? "
"ಹೂಂ"
"ಹಾಲು ಕುಡಿದೆಯಾ"
"ಹೂಂ"
"ಸರಿ ಮಲಗು"

ಇನ್ನು ಕೆಲವೊಂದು ಸೂಕ್ಷ್ಮ ವಿಷಯಗಳ ಬಗ್ಗೆ ಗಂಡ–ಹೆಂಡತಿಯರು ಹೇಗೆ ಮಾತನಾಡುತ್ತಿರುತ್ತಾರೆ ಎಂಬುದಕ್ಕೆ ಇದೇ ವಸಂತಗಾನದಲ್ಲಿಯ ಕೆಳಗಿನ ಮಾತುಗಳನ್ನು ಗಮನಿಸಬಹುದು.

"ಡಾಕ್ಟರು ಏನಂದರು?"
ಸರಳಾ ಮೊದಲು ನಾಚಿದಳು.
"ಹೇಳು ಪರವಾಗಿಲ್ಲ"
"ಒಂದೂವರೆ ತಿಂಗಳಾಗಿದೆ ಎಂದರು"
"ಇನ್ನೇನು ಹೇಳಿದರು?"

"ಹೋದ ಸಲದ ಹಾಗಾಗಬಾರದು. ಮೂರು ತಿಂಗಳಾಗೂ ವರೆಗೂ ತುಂಬಾ ಹುಷಾರಾಗಿರಬೇಕಂತೆ. ತುಂಬಾ ವಿಶ್ರಾಂತಿ

ತಗೋಬೇಕಂತೆ,ಆಯಾಸ ಮಾಡಿಕೊಳ್ಳಬಾರದಂತೆ ಚೆನ್ನಾಗಿ, ಊಟ ಮಾಡಿ ನಿದ್ದೆ ಮಾಡಬೇಕಂತೆ."

ಹೊಸದರಲ್ಲಿ ಮದುವೆಯಾದ ದಂಪತಿಗಳ ಬದುಕನ್ನು ಸಂಪೂರ್ಣವಾಗಿ ಅರಿತುಕೊಂಡ ತ್ರಿವೇಣಿಯವರು ಇಂತಹ ಸಂಭಾಷಣೆಗಳು ಹೆಚ್ಚು ಸರಸಮಯವಾಗಿರುವಂತೆ ಮಾಡಿದ್ದಾರೆ.

"ಛಾರ್ಮಿಂಗ್...ಛಾರ್ಮಿಂಗ್"

"ನಾನೋ ನನ್ನ ಅಲಂಕಾರವೋ?"

"ಎರಡೂ"

"ತಿಂಡಿ ತರ್ತೀನಿ ತಾಳಿ"

ಕಲ್ಯಾಣಿ–ರಾಮನಾಥರ ಈ ಸಂಭಾಷಣೆ 'ಬಾನು ಬೆಳಗಿತು' ಕಾದಂಬರಿಯಲ್ಲಿ ಬಂದದ್ದಾಗಿದೆ. ಇಲ್ಲಿ ಬರುವ ಸರಸಮಯ ಸಂಸಾರದ ಕಲ್ಪನೆ ಬಹಳ ನೈಜವಾಗಿ ಒಡಮೂಡಿದೆ. ಒಮ್ಮೆ ಕಲ್ಯಾಣಿಗೆ ತಲೆನೋವು ಬಂದಾಗ ಗಂಡನಾದ ರಾಮನಾಥ ಕೇಳುವ ಕಳಕಳಿಯ ಪ್ರಶ್ನೆ ಇಂತಿದೆ.

"ಹೇಗಿದೆ ಚಿನ್ನಾ ತಲೆನೋವು?"

"ಈಗ ಕೊಂಚ ವಾಸಿ"

"ಅಮೃತಾಂಜನ ಕೊಡಲಿ?"

"ಬೇಡ"

ಅಯ್ಯೋ ಆ ಅಮೃತಾಂಜನವಲ್ಲವೇ ಪೆದ್ದೂ

ನನ್ನ ಅಧರಾಂಜನ"

"ಹೋಗ್ರಿ"

"ಇದು ನನ್ನ ಮನೆ. ಹೋಗೂಂದರೆ ಎಲ್ಲಿಗೆ ಹೋಗ್ಲಿ?" ಇದೇ ಕಾದಂಬರಿಯಲ್ಲಿ ಬರುವ ಈ ದಂಪತಿಗಳ ವಿರಸದ ಸಂಭಾಷಣೆಗಳನ್ನೂ ನೋಡಬಹುದು.

"ಬೇಡದೆ ಹೋದರೆ ನನ್ನ ಬಿಟ್ಬಿಡು"
"ಬಿಡೋಕಲ್ಲ ನಿನ್ನ ಮದುವೆ ಮಾಡಿಕೊಂಡದ್ದು"
"ಯಾಕೆ ಮಾಡಿಕೊಂಡಿರಿ?"
"ಗೊತ್ತಿಲ್ಲವೇ ನಿನಗೆ ಯಾಕೇಂತ?"
"ನಾನೇನು ನಿಮಗೆ ಯಾವತ್ತೂ ಎದುರಾಡಿಲ್ಲ"
"ನಿಜ ಮರದ ತುಂಡೂ ಎದುರಾಡೋದಿಲ್ಲ.
"ತೀರ ನಿರ್ಜೀವಳಾಗಿದ್ದಿಯಾ ನೀನು"
"ಜೀವಂತಳಾಗಿರೋಳನ್ನ ಮದುವೆಮಾಡಿಕೊಳ್ಳಿ"
"ಹುಚ್ಚು ಹುಚ್ಚಾಗಿ ಮಾತನಾಡಬೇಡ
ಕನ್ನಡಿಯಲ್ಲಿ ಸ್ವಲ್ಪ ನಿನ್ನ ಮುಖಾ ನೋಡಿಕೋ
ಹೇಗಾಗಿದೇಯಂತ"

'ಶರಪಂಜರದ' ಕಾವೇರಿ ತನ್ನ ಸುತ್ತಲಿನ ಹದಗೆಟ್ಟ ಪರಿಸರದಿಂದ ಮತ್ತಷ್ಟು ಮಾನಸಿಕ ಒತ್ತಡಕ್ಕೆ ಸಿಲುಕಿ ದುರಂತವಾಗುವ ಅವಳ ಬಾಳಿಗೆ ಕಾರಣ ಈ ಸಂಭಾಷಣೆಗಳು.

"ಹೀಗೇಮ್ಮಾ ಕೆಲವರಿಗೆ ಹುಚ್ಚು ಹಿಡಿದರೆ
ಸ್ವಜನರನ್ನು ಕಂಡರೆ ಆಗೋದಿಲ್ಲ."
"ಯಾವ ಕಾಲಕ್ಕೆ ಯಾರಿಗೆ ಏನೋ?"
"ಮನುಷ್ಯನಿಗೆ ಅಹಂಕಾರವಿರಬಾರದು"

"ಗಂಡನೊಡನೆ ಮೆರೆದು ಮೆಟ್ಟಿಂಗಾಲಿಡುತ್ತಿದ್ದಳು.
ಈಗ ಅವಳಿಗೆ ತಕ್ಕ ಶಾಸ್ತಿಯಾಯಿತು"

ನೂರಾರು ಬಗೆಯ ಇಂತಹ ಮಾತುಗಳು, ಅವಹೇಳನಗಳು. ಉದ್ಗಾರಗಳು ಸಂಭಾಷಣೆಗಳನ್ನು, ಹೆಣೆಯುವಲ್ಲಿ ತ್ರಿವೇಣಿಯವರದು ಹೆಚ್ಚಿನ ಜಾಣ್ಮೆ. ಸಮಯೋಚಿತವಾಗಿ ಸಂದರ್ಭಕ್ಕೆ ತಕ್ಕಂತೆ ಬಹಳ ಸರಳವಾಗಿ ಮತ್ತು ಅಷ್ಟೇ ಪ್ರಭಾವಶಾಲಿಯಾಗಿ ಬರುವ ಇವರ ಸಂಭಾಷಣೆಗಳು ನಾಟಕೀಯವಾಗಿವೆ. ಆಕರ್ಷಣೀಯವಾಗಿವೆ.

೩. ಕನ್ನಡ ಸಾಹಿತ್ಯದಲ್ಲಿ ತ್ರಿವೇಣಿಯವರ ಸ್ಥಾನ

ಮಹಿಳಾ ಲೇಖಕಿಯರ ಕೊರತೆಯಿದ್ದ ಸಮಯದಲ್ಲಿ ತ್ರಿವೇಣಿಯವರು ಸಾಹಿತ್ಯರಂಗವನ್ನು ಪ್ರವೇಶಿಸಿದರು. ಕೆಲವೇ ವರ್ಷಗಳಲ್ಲಿ ಅಸಾಧಾರಣ ಜನಪ್ರಿಯತೆಯನ್ನು ಗಳಿಸಿದರು. ಕೊರತೆಯಿದ್ದ ಮಹಿಳಾ ಸ್ಥಾನಕ್ಕೊಂದು ಹೊಸ ಕಳೆ ತಂದು ಕೊಟ್ಟರು. ಹೆಣ್ಣುಮಕ್ಕಳು ಎಲ್ಲಾ ರಂಗದಲ್ಲಿ ಮುಂದುವರೆಯುತ್ತಿರುವದನ್ನು ಈಗಲೂ ಕೆಲವರು ಸಹಿಸರು. ಅಂದಮೇಲೆ ೧೯೫೦ರ ಸಮಯದಲ್ಲಿ ಪರಿಸ್ಥಿತಿ ತೀರಾ ಹೀನಾಯಮಾನವಾಗಿತ್ತು. ಅಂತಹದರಲ್ಲಿಯೇ ತ್ರಿವೇಣಿ ಧೈರ್ಯತೊಟ್ಟು

ಮುಂದೆ ಬಂದರು. ಅವರ ಪತಿಯ ಪ್ರೋತ್ಸಾಹವೂ ಇದಕ್ಕೆ ಬಹಳ ಮಟ್ಟಿಗೆ ಕಾರಣವೆನ್ನಬಹುದು. ೧೯೫೩ರಲ್ಲಿ ಇವರ ಪ್ರಥಮ ಕಾದಂಬರಿ ಪ್ರಕಟವಾಯಿತು. ಕೇವಲ ಹತ್ತು ವರ್ಷ ಗಳಲ್ಲಿ ಇಪ್ಪತ್ತೊಂದು ಕಾದಂಬರಿಗಳನ್ನೂ ಮೂರು ಸಣ್ಣ ಕಥಾ ಸಂಕಲನಗಳನ್ನೂ ಕನ್ನಡ ಸಾಹಿತ್ಯಕ್ಕೆ ನೀಡಿದ ಇವರ ಕೊಡುಗೆ ಮೆಚ್ಚುವಂತಹದು. ಇಂದಿಗೂ ಕೂಡ ತ್ರಿವೇಣಿಯವರ ಮೇಲಿದ್ದ ಓದುಗರ ಅಭಿಮಾನ ಕಡಿಮೆಯಾಗಿಲ್ಲ. ಸರಳ ಸುಂದರ ಶೈಲಿಯ ಅವರ ಕಾದಂಬರಿಗಳು ಜನಸಾಮಾನ್ಯನ ಮಟ್ಟಕ್ಕೆ ಮುಟ್ಟುವಂತ ಹವೂ ವಾಚನೀಯವೂ ಆಗಿವೆ.

ತ್ರಿವೇಣಿಯವರು ಮನಶ್ಶಾಸ್ತ್ರವನ್ನು ಕ್ರಿಯೆಯಲ್ಲಿ ಅರಗಿಸಿ ಕೊಳ್ಳಲು ಶಕ್ತರಾದಾಗ ಯಶಸ್ವಿಯಾಗುತ್ತಾರೆ. 'ಬೆಕ್ಕಿನಕಣ್ಣು' 'ಶರಪಂಜರ' ದಂತಹ ಕಾದಂಬರಿಗಳನ್ನು ಉದಾಹರಿಸಬಹುದು. ೧೯೬೩ರಲ್ಲಿ ಪ್ರಕಟವಾದ 'ಹಣ್ಣೆಲೆ ಚಿಗುರಿದಾಗ' ಕಾದಂಬರಿ ಮಾನವ ಸ್ವಭಾವದಲ್ಲಿ ಅವರ ಆಸಕ್ತಿ ಗಾಢವಾಗುತ್ತಿದ್ದುದನ್ನು ಪ್ರತಿಪಾದಿ ಸುತ್ತದೆ. ಅವರ ಕಾದಂಬರಿಯ ಮೌಲ್ಯಗಳು ಅಂದಿನ ಸಮಯ ದಲ್ಲಿದ್ದ ಮೌಲ್ಯಗಳಿಂದ ಭಿನ್ನವಾಗಿರಲಿಲ್ಲವಾದರೂ ಕೂಡ ಮನೋವಿಜ್ಞಾನವನ್ನು ಬಳಸಿದುದರಿಂದ ಅವರು ಹೊಸ ಹಾದಿ ಯನ್ನು ಹಿಡಿದುದು ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಮಹಿಳಾ ಲೇಖಕಿಯರ ಕಾದಂಬರಿಯ ವಸ್ತು ಕೌಟುಂಬಿಕ ಜೀವನ ವಾಗಿರುತ್ತದೆ. ತ್ರಿವೇಣಿಯವರಲ್ಲಿಯೂ ನಾವು ಇದನ್ನು ಕಾಣ ಬಹುದಾದರೂ ಇದಕ್ಕಿಂತ ಹೆಚ್ಚಿನ ವಿಚಾರಗಳು ಅಂದರೆ ಸಾಮಾಜಿಕ ಜ್ವಲಂತ ಸಮಸ್ಯೆಗಳು, ಗಂಡು–ಹೆಣ್ಣುಗಳಲ್ಲಿರ ಬೇಕಾದ ಸಮಾನತೆ, ಸ್ತ್ರೀಯ ಪೂರ್ಣ ಸ್ವಾತಂತ್ರ್ಯ, ಸಮಾಜ

ದಿಂದಾಗುವ ಸ್ತ್ರೀಯ ಶೋಷಣೆ. ಅಜ್ಞಾನ ಮೂಢನಂಬಿಕೆಗಳ ನಿವಾರಣೆ ಇವೆಲ್ಲಾ ಇವರ ಕಾದಂಬರಿಯ ವಸ್ತುಗಳಾಗಿ ಒಡ ಮೂಡಿವೆ.

ಕಳೆದ ಎರಡು ದಶಕಗಳಲ್ಲಿ ನೂರಾರು ಮಹಿಳೆಯರು ಕಾದಂಬರಿಗಳನ್ನು ಬರೆದಿದ್ದಾರೆ. ಇದರಲ್ಲಿ ಎಷ್ಟೋ ಕಾದಂಬರಿ ಗಾರ್ತಿಯರು ತ್ರಿವೇಣಿಯವರಿಂದ ಪ್ರಭಾವಿತರಾಗಿದ್ದಾರೆ. ಇವರ 'ಶರಪಂಜರ'ದಂತಹ ಚಿತ್ರಗಳು ಇಂದಿಗೂ ಪ್ರಸಿದ್ಧ ವಾಗಿವೆ. ಮನೋವಿಜ್ಞಾನದ ಬಳಕೆ ಇವರ ಹೊಸ ಕೊಡುಗೆ ಎಂದು ಧಾರಾಳವಾಗಿ ಹೇಳಬಹುದು.

ಕನ್ನಡ ಸಾಹಿತ್ಯ ಮೊದಲಿನಿಂದ ರಾಜಾಶ್ರಯದಲ್ಲೇ ಬೆಳೆದು ಬಂದಿದೆ. ಇಂದಿನ ಪ್ರಜಾಪ್ರಭುತ್ವಯುಗದಲ್ಲಿ ಬರಹ ಗಾರರ ಗೋಳು ಹೇಳತೀರದು. ಗುಂಪುಗಾರಿಕೆ ಇನ್ನೊಂದು ಗಂಡಾಂತರಕಾರಿ ಸೂಚನೆಯಾಗಿದೆ. ಪ್ರಕಾಶಕರ ಕೊರತೆಯಿದೆ. ಪತ್ರಿಕೆಗಳ ಅಡಚಣೆಯಿದೆ. ಎಲ್ಲಕ್ಕೂ ಮುಖ್ಯವಾಗಿ ಬೆಲೆ ಕೊಟ್ಟು ಓದುವವರ ಸಂಖ್ಯೆ ತೀರ ಕಡಿಮೆಯಿದೆ. ಇಂತಹದರಲ್ಲಿ ಮಹಿಳೆ ಯಾದ ತ್ರಿವೇಣಿಯವರು ಇಷ್ಟು ಒಳ್ಳೆಯ ಕೃತಿಗಳನ್ನು ರಚಿಸಿ ಮುಂದೆ ಬಂದಿರುವದು ನಿಜಕ್ಕೂ ಸುತ್ಯಾರ್ಹವಾಗಿದೆ.

'ಕೀಲುಗೊಂಬೆ'ಯಂತಹ ಕಾದಂಬರಿಗಳನ್ನು ಓದಿದಾಗ ಯಾವ ಸಿಡುಕಿನ ಸ್ವಭಾವದ ಗಂಡೂ ಕೂಡ ಶಾಂತಸ್ವಭಾವ ದವನಾಗುತ್ತಾನೆ. ಹೆಣ್ಣು ಕೇವಲ ಭೋಗದ ವಸ್ತು. ಮನೆಯಲ್ಲಿ ಕೆಲಸಮಾಡುವ ಸೇವಕಿ. ಆಕೆಗೇಕೆ ಉಳಿದ ವಿಚಾರಗಳು ಎಂದು

ತಿಳಿದುಕೊಂಡ ಗಂಡಿಗೆ ಚಾಟಿಯ ಏಟಿನಂತೆ ಉತ್ತರ ಕೊಡುತ್ತದೆ ಕೀಲುಗೊಂಬೆ.

ದಾಂಪತ್ಯದ ರಥ ಸುಗಮವಾಗಿ ಸಾಗಬೇಕಾದರೆ ಗಂಡು–ಹೆಣ್ಣುಗಳೆಂಬ ಎರಡೂ ಗಾಲಿಗಳೂ ಸರಿಯಾಗಿರಬೇಕು. ಅಂದಾಗಲೇ ಬದುಕು ಬಂಗಾರವಾಗುವದು. ಹೆಣ್ಣನ್ನು ಕಡೆಗಾಣಿಸುವದರಿಂದ, ತಿರಸ್ಕರಿಸುವದರಿಂದ ಉಂಟಾಗುವ ಹಾನಿಗಳನ್ನು ಕಾದಂಬರಿಕಾರ್ತಿ ಸಾಕಷ್ಟು ಪುರಾವೆಗಳೊಂದಿಗೆ ಒದಗಿಸಿದ್ದಾರೆ. ಒಂದು ಸಂಸಾರದ ಚಿತ್ರಣವನ್ನೂ ಅತ್ಯಂತ ಸಹಜವಾಗಿ ಓದುಗರ ಕಣ್ಮುಂದೆ ತಂದು ನಿಲ್ಲಿಸುವ ಅವರ ಕಾದಂಬರಿಗಳು ನಿಜವಾಗಿಯೂ ಖುಷಿಕೊಡುತ್ತವೆ. ಯಾವುದೇ ಕಠಿಣ ತಂತ್ರಗಳನ್ನು ಬಳಸಿ ಕಾದಂಬರಿ ಓದುಗನಿಗೆ ಅರ್ಥವಾಗದಂತೆ ಮಾಡುವ ಉಳಿದವರಂತೆ ಇವರ ಬರಹವಲ್ಲ. ಹೇಳಬೇಕಾದುದನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಅಷ್ಟೇ ಸರಳವಾಗಿ ಇವರು ಹೇಳುವರು.

ತ್ರಿವೇಣಿಯವರ ಸಣ್ಣ ಕಥೆಗಳೂ ಕೂಡ ಅಷ್ಟೇ ಆಕರ್ಷಣೀಯವಾಗಿವೆ. 'ಸಮಸ್ಯೆಯ ಮಗು' ಕಥಾ ಸಂಕಲನ ರಾಜ್ಯ ಸರಕಾರದ ಬಹುಮಾನ ಪಡೆದಿದೆ. ಒಟ್ಟಿನಲ್ಲಿ ತ್ರಿವೇಣಿಯವರ ಕಾದಂಬರಿಗಳು ಯಾವ ಓದುಗನಿಗೂ ಎಂದಿಗೂ ಬೇಸರ ಬಾರದವುಗಳಾಗಿವೆ. ಕೇವಲ ಹೆಸರುಗಳಿಸಬೇಕೆನ್ನುವ ಉದ್ದೇಶದಿಂದ ತ್ರಿವೇಣಿಯವರು ಸಾಹಿತ್ಯ ಪ್ರಪಂಚಕ್ಕೆ ಕಾಲಿಡಲಿಲ್ಲ.

ಸಮಾಜದಲ್ಲಿಯ ಕುಂದು–ಕೊರತೆಗಳನ್ನು, ಅನ್ಯಾಯ–ಅನೀತಿಗಳನ್ನು ನೋಡಿದ ಅವರ ಹೃದಯ ಅದೇ ಕಾದಂಬರಿಳಗ

ಮುಖಾಂತರ ಹರಿದುಬಂದಿತು. ಇಂದಿನ ಮಹಿಳಾ ಲೇಖಕಿಯರಿಗೆಲ್ಲಾ ತ್ರಿವೇಣಿಯವರು ನಿಜವಾಗಿಯೂ ಆದರ್ಶಪ್ರಾಯರಾಗಿದ್ದಾರೆ. ಅಷ್ಟು ಅಲ್ಪ ಅವಧಿಯಲ್ಲೇ ಒಳ್ಳೆಯ ಗಮನಾರ್ಹವಾದ ಮತ್ತು ಹೆಚ್ಚು ಸಂಖ್ಯೆಯ ಕೃತಿಗಳನ್ನು ನೀಡಿದ ಅವರ ಸ್ಥಾನ ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿದಿದೆ.

೪. ತ್ರಿವೇಣಿಯವರ ಕೃತಿಗಳು

ತ್ರಿವೇಣಿಯವರು ಕೇವಲ ಒಂದೇ ಒಂದು ದಶಕದಲ್ಲಿ ೨೧ ಕಾದಂಬರಿಗಳನ್ನು ೩ ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಅವುಗಳ ವಿವರ ಕೆಳಗಿನಂತಿದೆ.

೧. ಕಾದಂಬರಿಗಳು:

ಹೂವು ಹಣ್ಣು, ಅಪಸ್ವರ, ಅಪಜಯ, ಸೋತು ಗೆದ್ದವಳು, ಮೊದಲ ಹೆಜ್ಜೆ, ಕೀಲುಗೊಂಬೆ, ಕಂಕಣ, ಮುಕ್ತಿ, ಬೆಳ್ಳಿ ಮೋಡ, ಅವಳ ಮನೆ, ತಾವರೆಯ ಕೊಳ, ಹಣ್ಣೆಲೆ ಚಿಗುರಿದಾಗ, ಅವಳ ಮಗಳು, ಬೆಕ್ಕಿನ ಕಣ್ಣು, ದೂರದ ಬೆಟ್ಟ, ಮುಚ್ಚಿದ ಬಾಗಿಲು, ಶರಪಂಜರ, ಹೃದಯಗೀತ, ವಸಂತಗಾನ, ಕಾಶೀಯಾತ್ರೆ, ಬಾನು ಬೆಳಗಿತು.

೨. ಕಥಾ ಸಂಕಲನಗಳು:

ಹೆಂಡತಿಯ ಹೆಸರು, ಎರಡು ಮನಸ್ಸು, ಸಮಸ್ಯೆಯ ಮಗು.

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

---

೧. ಗ್ರಂಥಾಲಯ ಸೇವೆ —ಎಸ್. ಎಲ್. ಸಂಗಮ

೨. ಶರಣ ಸಾಹಿತ್ಯ —ಬಸವಣ್ಣೆಪ್ಪ ಸೋ. ಗೊರವರ

೩. ಉಪ್ಪು ಮತ್ತು ಅದರ ಸ್ವರೂಪ —ಬಿ. ಕೆ. ಚಳಗೇರಿ

೪. ಸಾಂಸರ್ಗಿಕ ರೋಗಗಳು ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳು —ಪಿ. ಎಸ್. ಬಣಕಾರ

೫. ಗಾದೆಗಳಲ್ಲಿ ಆರೋಗ್ಯ —ಪಿ. ಎಸ್. ಶಂಕರ

೬. ಚಟಗಳು, ರೂಢಿಗಳು ಮತ್ತು ಕ್ಯಾನ್ಸರ —ಸ. ಜ. ನಾಗಲೋಟಿಮಠ

೭. ಸಿಡುಬುರೋಗ —ಡಾ. ಬಿ. ಟಿ. ತುಕೋಳ

೮. ರಂಗಭೂಮಿಯ ನಟಸಾರ್ವಭೌಮ ಸಿದ್ರಾಮಪ್ಪ ಹಂದಿಗನೂರ —ಡಾ. ಬಿ. ಆರ್. ನಾಡಗೌಡ

೯. ಮೋಕ್ಷಗುಂಡಂ ವಿಶ್ವೇಶ್ವರಯ್ಯ —ಶಿವಕುಮಾರ ಪಾಟೀಲ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩